# ರಾಘವೇಂದ್ರ ಪಾಟೀಲರ ಕಥೆಗಳು :
# ಚರಿತ್ರೆಯ ಜೊತೆ ಚಲನೆಯ ಸಂಬಂಧ

- ಎಸ್ ಆರ್ ವಿಜಯ ಶಂಕರ್

ವ್ಯಕ್ತಿ, ಸಮುದಾಯ, ಚರಿತ್ರೆ ಇವುಗಳ ಕೂಡು ಬಿಂದುವಿನಲ್ಲಿ ಬದುಕಬೇಕಾಗಿ ಬರುವ ಮಾನವರ ನಾನಾ ನೆಲೆಗಳನ್ನು ಕಾಣಿಸುವ ಪ್ರಯತ್ನಗಳೇ ರಾಘವೇಂದ್ರ ಪಾಟೀಲರ ಕಥೆಗಳ ಸ್ಥಾಯಿ ಶ್ರುತಿ. ಪಾಟೀಲರಿಗೆ ಅಂತಹ ಶ್ರುತಿ ಮನುಷ್ಯ ಭಾವನೆಗಳ ಒಳದನಿಗಳೊಡನೆ ಹೊಂದಿಕೆಯಾದರೆ ಸಾಕು. ಅವರ ಕತೆಗಳಲ್ಲಿ ಅಂತಹ ಒಳದನಿಗಳು ಹೊರಲೋಕದ ಸತ್ಯದೊಡನೆ ಹೇಗೋ ಒಂದು ಲಯವನ್ನು ಸಾಧಿಸುತ್ತವೆ. ಆ ಕೂಡು ಬಿಂದು ಪಾಟೀಲರ ನಿರಂತರ ಶೋಧದ ತಾತ್ವಿಕ ನೆಲೆ. ಆದ್ದರಿಂದಲೆ ಅದು ಸ್ಥಾಯಿ.

ಪಾಟೀಲರ ಕಥಾಲೋಕದ ಶೋಧದ ಸಾಧನೆಗಳೆಲ್ಲಾ ತಮಗೆ ತಾವೇ ಪ್ರಮಾಣ. ಅವರ ಕತೆಗಳಲ್ಲಿ ಪ್ರಾರಂಭವಾದ ಶೋಧದ ಒಂದು ನೆಲೆ 'ತೇರು' ಕಾದಂಬರಿಯಲ್ಲಿ ಹರಳುಗೊಂಡಿತು. ತೇರು ಕಾದಂಬರಿ ಬಳಿಕ ಬರೆದ ಕತೆಗಳಲ್ಲಿ, ಹಿಂದೆ ಸೂಚಿಸಿದ ಕೂಡು ಬಿಂದುವಿನ ನೆಲೆಯಿಂದ ಮತ್ತೆ ಶೋಧದ ಮರು ಪಯಣ ಪ್ರಾರಂಭವಾಗಿದೆ. ಅವರ 'ಮಾಯಿಯ ಮುಖಗಳು' ಕತೆಯಲ್ಲಿ ಹೊಸದಾಗಿ ಪ್ರಾರಂಭವಾದ ಅಲೌಕಿಕದ ಶೋಧ ಅವರ ಈಚಿನ ಕತೆ 'ಮತ್ತೊಬ್ಬ ಮಾಯಿ'ಯಲ್ಲಿ ಮುಂದುವರೆದಿದೆ. ಇಲ್ಲಿನ ಲೋಕ, ನಾಟಕದ ಪಾತ್ರಧಾರಿಗಳು ಅಲೌಕಿಕವಾದ್ದು. ವಿಧಿಯೇ ? ಅಥವಾ ಅದಲ್ಲದೆ ಏನಾದರೂ ಇದೆಯೆ ? ಎಂಬ ಶೋಧದಲ್ಲಿ ಮುಂದೆ ಯಾವಾಗ ಇನ್ನೊಂದು 'ತೇರ'ನ್ನು ಎಳೆಯುತ್ತಾರೋ ಎಂಬುದರ ಬಗ್ಗೆ ಪಾಟೀಲರ ಗಂಭೀರ ಓದುಗರಿಗೆಲ್ಲಾ ಕೂತೂಹಲವಿದ್ದೀತು .

ಸಂಗೀತ ಹಾಗೂ ಜಾತ್ರೆಯ ರೂಪಕಗಳ ಮೂಲಕ ರಾಘವೇಂದ್ರ ಪಾಟೀಲರ ಸಮಗ್ರ ಕತೆಗಳ ಬಗ್ಗೆ ಒಟ್ಟಾಗಿ ಹೇಳಲು ಪ್ರಯಿತ್ನಿಸಿದೆ. ಪಾಟೀಲರ ಅನುಭವ ಲೋಕ-ಜಾತಿ ಪರಂಪರೆ, ಧರ್ಮ ಇವುಗಳ ಮೂಲಕ ಸಮುದಾಯದಲ್ಲಿ ಮುಳುಗಿ ಏಳುವ ವ್ಯಕ್ತಿಗಳನ್ನು ಸಮಾನಾಂತರದಲ್ಲಿ ಕಾಣಿಸುತ್ತಾ ಹೋಗುತ್ತದೆ. ಆದ್ದರಿಂದ ಅವನ್ನು ಈ ತನಕ ಸಾಧಿತವಾದ ಸಾಹಿತ್ಯ ಮೌಲ್ಯ ಮಾಪನದ ಮಾನದಂಡಗಳಿಗೆ ಸಂಪೂರ್ಣ ಅಳವಡಿಸಿ ಹೇಳಲಾಗುವುದಿಲ್ಲ. ಈ ಕಾರಣದಿಂದ ಅವುಗಳು ಯಾಕೆ ತಮಗೆ ತಾವೇ ಪ್ರಮಾಣ ಎಂಬ ವಿಚಾರವನ್ನು ಗಮನಿಸಬಹುದು.

ಪಾಟೀಲರ ಕಥೆಗಳ ಧ್ವನಿ ಶಕ್ತಿಯು ಕತೆಗಳೊಳಗೆ ಹುದುಗಿರುವ ಬಹುಕೇಂದ್ರಿತ ದ್ವಂದ್ವಗಳ ಅನುರಣನೆಗಳಲ್ಲಿ ಅಡಗಿವೆ. ಇದರಿಂದಾಗಿ ಅಲ್ಲಿನ ಅನುಭವ ಲೋಕವನ್ನು ಒಂದು ನಿಶ್ಚಿತ ದೃಷ್ಟಿಕೋನದಿಂದ ಮಾತ್ರ ಕಾಣಲಾಗುವುದಿಲ್ಲ. ಹಾಗೆಂದು ಅವು ತಮ್ಮನ್ನು ಕಾಣಬೇಕಾದ ಕ್ರಮಗಳನ್ನು (ಮಾನದಂಡಗಳನ್ನು) ತಾವೇ ಸ್ಥಾಪಿಸಿ ಸಾಹಿತ್ಯ ಚಿಂತನೆಯ ಸ್ಥಾನ ಪಲ್ಲಟಗಳನ್ನು ನಿರ್ದೇಶಿಸಲಿಲ್ಲ. ಆದ್ದರಿಂದಲೂ ಈ ಕತೆಗಳು ತಮಗೆ ತಾವೇ ಪ್ರಮಾಣ. ಈ ಕಾರಣಕ್ಕೆ ನವ್ಯೋತ್ತರ ಪ್ರಮುಖ ಕತೆಗಾರರಾದ ಕೆ.ಸತ್ಯನಾರಾಯಣ, ಅಮರೇಶ ನುಗದೋಣಿ, ವಿವೇಕ ಶಾನಭಾಗ, ಮೊಗಳ್ಳಿ ಗಣೇಶ, ಕುಂವೀ ಮೊದಲಾದವರ ಕತೆಗಳೊಡನೆ ಪಾಟೀಲರ ಕತೆಗಳ ಸುಲಭ ಹೋಲಿಕೆಯೂ ಸಾಧ್ಯವಾಗುವುದಿಲ್ಲ.

ರಾಘವೇಂದ್ರ ಪಾಟೀಲರ ತಾತ್ವಿಕ ಶೋಧದ ಮೂಲ ನೆಲೆ, ಆಧುನಿಕ ವೈಜ್ಞಾನಿಕ ಮನೋಭಾವದಿಂದ ವಿಚಾರ ಪ್ರಚೋದನೆಗೆ ತೊಡಗುತ್ತದೆ. ಇದು ಶಿವರಾಮ ಕಾರಂತರ ವೈಚಾರಿಕತೆಯಂತೆ ನೇರ. ವೈಜ್ಞಾನಿಕ ನೆಲೆಗಳನ್ನು ಆಧರಿಸಿರುವ ಆಧುನಿಕತೆ. ಆದಕಾರಣ ಪಾಟೀಲರ ಕತೆಗಳ ಸ್ಥಾಯಿ, ಚಾರಿತ್ರಿಕ ಸಂದರ್ಭದಲ್ಲಿದ್ದರೂ ಮೂಲತಃ ಓದುಗನ ವಿಚಾರಗಳನ್ನು ಕೆಣಕುವಲ್ಲಿ ಆಸಕ್ತಿ ತಳೆದಿವೆ. ಆದರೆ ಅವರು ಕಟ್ಟುವ ಸಮುದಾಯದ ವಿವರಗಳ ತನ್ಮಯತೆ ಸೃಜಿಸುವ ಮನೋಭಾವ, ಓದುಗನ ಭಾವಲೋಕದಲ್ಲಿ ಪವಡಿಸಲು ಹವಣಿಸುತ್ತವೆ. ಆವೇಶದಲ್ಲಿ ಸತ್ಯಕ್ಕೆ ಎದುರಾಗಲಾರೆ ಎಂಬ ಕಾರ್ಯ ಕಾರಣದ

ಸಂಬಂಧ ಶೋಧದ, ಆಧುನಿಕ ವೈಜ್ಞಾನಿಕ ಮನೋಭಾವ ಒಂದು ಕಡೆ. ಚರಿತ್ರೆಯ ಮೂಲದಿಂದ ಹುಟ್ಟಿದ, ಸಂಪ್ರದಾಯವೇ ಪರಂಪರೆಯೋ ಎಂಬಂತೆ ಬೆಳೆದು ಉಂಟುಮಾಡುವ ಧಾರ್ಮಿಕ ಮನೋಭಾವ ಸೃಷ್ಟಿಸುವ ಆವೇಗ ಇನ್ನೊಂದು ಕಡೆ. ಇವೆರಡೂ ಎದುರು ಬದುರಾಗುವ ತಾತ್ವಿಕ ಸಂಘರ್ಷವನ್ನು ಹೇಗೆ ಎದುರಿಸಬೇಕೆಂಬ ಹೋರಾಟ, ಕೆಲವೊಮ್ಮೆ ಸೃಜನಶೀಲ ಪ್ರಕ್ಷುಬ್ಧತೆ,(ತೇರು–ಕಾದಂಬರಿ) ಇನ್ನು ಕೆಲವು ಸಲ ಸೃಜನಶೀಲ ಉದ್ವಿಗ್ನತೆ(ಮಾಯಿಯ ಮುಖಗಳು)ಗಳಿಗೆ ಕಾರಣವಾಗುತ್ತವೆ.

ಅಂತಹ ಸೃಜನಶೀಲ ಆವೇಗ, ಆವೇಶಗಳು ಸಮುದಾಯದ ಭಾಗವಾಗಿ ವ್ಯಕ್ತಿಯ ಮೇಲೆ ಬೀರುವ ಪ್ರಭಾವದಿಂದ ಬಲಗೊಂಡು, ಅತ್ತ ಕೇವಲ ಧಾರ್ಮಿಕ ಆಚರಣೆಯ ಭಾಗವೂ ಅಲ್ಲದ ಇತ್ತ ವೈಯಕ್ತಿಕ ಅನುಭಾವವೂ ಆಗದೆ, ರಾಜಕೀಯ ಮಿಶ್ರಿತ ಲೋಕದಲ್ಲಿ ಸಿಕ್ಕಿ ಸುಳಿಯುವ ಲೋಕ, ಇಲ್ಲಿನ ಕತೆಗಳಲ್ಲಿ ವ್ಯಕ್ತಿ, ಸಮುದಾಯ, ಚರಿತ್ರೆಗಳು ಕೂಡುವ ಬಿಂದು. ಅಂತಹ ಕೂಡು ಬಿಂದುಗಳಲ್ಲಿ ಅತ್ತ ಕೇವಲ ವೈಚಾರಿಕತೆಯಲ್ಲೂ ಸಲ್ಲದೆ ಇತ್ತ ಕೇವಲ ಭಾವುಕತೆಯಲ್ಲೂ ಇರಲಾರದ ಪಾಟೀಲರ ಕಥಾ ಲೋಕವನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಕನ್ನಡ ಸಾಹಿತ್ಯ ಪರಂಪರೆಯ ದೃಷ್ಟಿಯಿಂದ ಹೇಗೆ ಸ್ಥಾಪಿಸಿಕೊಳ್ಳಬೇಕು? ಎಂಬದು ಈ ಕತೆಗಳ ಮೊದಲ ಓದಿಗೇ ಎದುರಾಗುವ ಪ್ರಶ್ನೆಗಳು.

ಪ್ರಾತಿನಿಧಿಕವಾಗಿ ಕೆಲವು ಕತೆಗಳ ಮೂಲಕ ಪಾಟೀಲರ ಕಥಾ ಚೌಕಟ್ಟನ್ನು ನಾವು ಗ್ರಹಿಸಬಹುದು. ಕಾಡಜ್ಜ, ಬಾಳವ್ವ'ನ ಕನಸುಗಳು, ಕಥಿಯ ಹುಚ್ಚಿನ ಕರಿ ಟೊಪಿಗಿಯ ರಾಯ, ದೇಸಗತಿ, ಬೆಳಕ್ಕಿಗಳ ಲೋಕದಲ್ಲಿ, ಲಯ_. ಮಾಯಿಯ ಮುಖಗಳು, ತುದಿಯೆಂಬೋ ತುದಿಯಿಲ್ಲ ಎಂಬ ಕತೆಗಳನ್ನು ಮುಖ್ಯವಾಗಿ ಬಳಸಿಕೊಂಡು ವ್ಯಕ್ತಿ, ಸಮುದಾಯ, ಚರಿತ್ರೆಗಳ ಕೂಡು ಬಿಂದುವಿನಲ್ಲಿ ಸವೆಯುವ' ಜೀವಗಳ ವಿವರಗಳನ್ನು ಕಾಣಬಹುದು.

ಕಾಡಜ್ಜ ಮೊಮ್ಮಗನಿಗಾಗಿ ತೂಗುಮಂಚ ಮಾಡಲು ಹೊರಟವ ತೀರಿಕೊಳ್ಳುತ್ತಾನೆ. ಅನಾಥನಂತೆ ಶಹರದಿಂದ ಹಿಂತಿರುಗಿದ ಅವನ ದೇಹ ಸುಟ್ಟ ಬಳಿಕ ಬೂದಿಕೂಡುವಾಗ ಉಂಟಾಗುವ ಭಾವನಾತ್ಮ ಸಂಬಂಧದಿಂದ ಕತೆ ಕೊನೆಗೊಳ್ಳುತ್ತದೆ.ಅಜ್ಜ, ಮಗ, ಮೊಮ್ಮಕ್ಕಳ ಸಂದರ್ಭದ ವಿಭಿನ್ನ ಮಾನಸಿಕ ಅವಸ್ಥೆಗಳು ಲೋಕಗರ್ಭದ ಸಹಜ ಅವಸ್ಥೆಗಳಂತೆ ಹುಟ್ಟುಕೊಳ್ಳುತ್ತವೆ. ವ್ಯಕ್ತಿಯಿಂದ, ಕುಟುಂಬ ಹಾಗೂ ಕುಟುಂಬದಿಂದ ಸಮುದಾಯದ ನೆಲೆಗೆ ಪರಿವರ್ತನೆಗೊಳ್ಳುವ ಲೇಖಕನ ಸಂಕ್ರಮಣಾವಸ್ಥೆಯ ಕತೆಯಿದು. ಪಾಟೀಲರ ಕತೆಗಳಲ್ಲಿ ಈ ಪಲ್ಲಟದ ಮೊದಲ ಹಂತ 'ಪ್ರತಿಮೆಗಳು' ಸಂಕಲನದಲ್ಲಿ ಪ್ರಾರಂಭವಾಗಿವೆ.

ಇದೇ ಹಂತದಲ್ಲಿ ಪಾಟೀಲರ ಭಾಷೆಯ ಬಳಕೆಯನ್ನು ನಾವು ಗಮನಿಸಬೇಕು. ಅವರ ಮೊದಲ ಸಂಕಲನ 'ಒಡಪುಗಳು' ಕತೆಗಳಲ್ಲಿಯೇ ಪಾಟೀಲರು ಕತೆಗಳ ಪರಿಸರದ ಭಾಷೆಯಿಂದ ಪದಗಳನ್ನು ಹೆಕ್ಕುತ್ತಿದ್ದರು. ಮುಂದುವರೆಯುತ್ತಾ ಅದು ಪಾತ್ರಗಳು ಬದುಕುವ ಸಮುದಾಯದ ಭಾಷೆಯ ಬಳಕೆಯಾಗಿ ಬೆಳೆಯಿತು. 'ತೇರು' ಕಾದಂಬರಿಯಲ್ಲಿ ಗೊಂದಲಿಗರ ಹಾಡಿನ ರೂಪ ಸಂಪೂರ್ಣ ಸಮುದಾಯದ ಭಾಷಾ ಪ್ರತಿನಿಧಿಯಾಗಿ ಕಾದಂಬರಿ ಪ್ರಾರಂಭಗೊಂಡಿದೆ. ಸಮುದಾಯದ ಭಾಷೆಯ ಬಳಕೆ ಕಥಾ ಲೋಕಕ್ಕೆ ಕೇವಲ ವಾಸ್ತವದ ಮೆರಗನ್ನು ಹೆಚ್ಚಿಸುವ ತಂತ್ರವಾಗಿ ಈ ಕತೆಗಳಲ್ಲಿ ಬಳಕೆಯಾಗಿಲ್ಲ. ಅಂತಹ ಪರಿಣಾಮ ಅದರ ಉಪ ಉತ್ಪತ್ತಿಯಾಗಿ ಸಾಬೀತಾಗಿರಬಹುದು. ಆದರೆ ಇಲ್ಲಿ ಸ್ಥಳೀಯ ಭಾಷೆಯ ಬಳಕೆ ಕತೆಯ ತಾತ್ವಿಕ ಭಿತ್ತಿಯೇ ಆಗಿದೆ. ಆ ಮೂಲಕ ಭಾಷೆ ಪಾಟೀಲರಿಗೆ ಸಂವಹನದ ಮಾಧ್ಯಮ ಮಾತ್ರವಾಗಿಲ್ಲ. ಭಾಷೆ ಅವರಿಗೆ ಸಮುದಾಯದ ಹಾಗೂ ಅಲ್ಲಿನ ಜೀವನ ಕ್ರಮದ ಪ್ರತಿ ಸೃಷ್ಟಿಯ ಒಂದು ಸಾಧನವಾಗಿದೆ.

ಈ ಹಿನ್ನೆಲೆಯಲ್ಲಿ ನಾವು 'ಬಾಳವ್ವನ ಕನಸುಗಳು' ಕತೆಯನ್ನು ಗಮನಿಸಬಹುದು. ಪ್ರಾರಂಭದಿಂದಲೂ ಈ ಕತೆಯಲ್ಲಿ ಭಾಷೆಯ ಬಳಕೆ ಹಾಗೂ ಹೇಳುವ ನಾಟಕೀಯತೆಗಳು ಜಾನಪದ ಕಲೆಗಳನ್ನು ನೆನಪಿಸುವಂತಿದೆ. ಮೂಲತಃ ರಾಘವೇಂದ್ರ ಪಾಟೀಲರ ಮನೋಭಾವ ಕಾರ್ಯಕಾರಣ ಸಂಬಂಧಗಳನ್ನು ಹುಡುಕುವ ಆಧುನಿಕ ಮನೋಭಾವ. ಆದರೆ ಬಾಳವ್ವನ

ಸಂದರ್ಭದಲ್ಲಿ ಮನುಷ್ಯ ಪ್ರಯತ್ನವನ್ನು ಮೀರಿದ ಶಕ್ತಿ ಯಾವುದಾದರೂ ಮಾನವನ ಈ ದುಃಖಗಳನ್ನು ನಿರ್ದೇಶಿಸುತ್ತಿರಬಹುದೋ ಏನೋ ಎಂಬ ಶಂಕೆಯೂ ಹಾಯ್ದು ಹೋಗುತ್ತದೆ. ಮಾಯಿಯ ಮುಖಗಳು ಕತೆಗಳ ಬಳಿಕ ಅಲೌಕಿಕದ ಆ ಶೋಧ ಇನ್ನಷ್ಟು ಸ್ಪಷ್ಟವಾಗಿದೆ.

ಬಾಳವ್ವ ಅರ್ಥಾತ್ ಬಾಳಿಮಾ ಬುಡ್ಡು ಸಾಬನ ಬೀಬಿ. ನಿಕಾ ಆಗಿ ಈ ಊರಿಗೆ ಬಂದ ಲಾಗಾಯ್ತು ಊರೊಳಗಿನ ಎಲ್ಲಾ ಹಾರೂರ ಮನಿಗಳೊಳಗೆ ಮುಸರಿ – ಒಗ್ಯಾಣ ಮಾಡುವಾಕಿ. ಈಗ ವಯಸ್ಸಾಗಿ ಬರೇ ರಾಯರ ಮನೆಯೊಳಗೆ ಮಾತ್ರ ಕಸ ಮುಸರಿ ಕೆಲಸ ಮಾಡುತ್ತಾಳೆ. ಅವಳ ಗಂಡ ಬುಡ್ಡೂ ಸಾಬ ಪಿಂಜಾರ ಮುದುಕ. ಈ ದಂಪತಿಗಳ ಮಗ ಹುಸನ್ಯಾನಿಗೆ ರಾಯರ ಸೊಸೆಯ ತವರು ಮನೆಯಲ್ಲಿ ಮುಸುರೆ ತಿಕ್ಕುವ ಕುಲಸುಮ್ಮಾನ ಮಗಳು ರಾಜಮಾನ ಜೊತೆ ಮದುವೆ ನಡೆಯುತ್ತದೆ. ಮೇಲು ವರ್ಗದ ಜನಜೀವನದ ನಡುವೆ ಒಳಹರಿವಿನಂತಿರುವ ಮುಸುರೆ ತಿಕ್ಕುವ ಬಾಳವ್ವನ ಜೀವನ ಕಥೆಯ ಏಳು ಬೀಳುಗಳೇ ಪಾಟೀಲ ಈ ನೀಳ್ಗತೆಯ ತಿರುಳು. ಮದುವೆಯ ಬಂಧನದೊಳಗೆ ಸಿಗಲು ಜೀತದಂತೆ ಗಿರಣಿಯಲ್ಲಿ ಕೆಲಸ ಮಾಡುವ ಪಾಡಿಗೆ ಬೀಳುವ ಹುಸನ್ಯಾ ಬುಡ್ಡೂ ಸಾಬ ಅರಳಿಯನ್ನು ಹೊಡೆದು ಗಾದಿ ಹಾಕುವ ಕೆಲಸದ ಕಸುಬಿನವ. ಆಧುನಿಕ ಹಾಸಿಗೆಗಳು ಬಂದು ಅವನ ಕಸುಬು ಈಗ ಅದಾಯ ತರುತ್ತಿಲ್ಲ. ಜೀವನ ನಡೆಯುವುದು ಬಾಳವ್ವನ ಆದಾಯದಿಂದಲೆ. ಹಗ್ಗ ಹೊಸೆಯುವ ರಾಮಜ್ಜ ಹಾಗೂ ಬುಡ್ಡೂ ಸಾಬ ಪರಮ ಸ್ನೇಹಿತರು.

ರಾಮಜ್ಜ ಹಾಗೂ ಬುಡ್ಡೂ ಸಾಬರ ಸ್ನೇಹಕ್ಕೆ ಲೌಕಿಕ ನೆಲೆ ಇರುವಂತೆ ನಿರ್ಮೋಹದ ಒಂದು ತಾತ್ವಿಕ ನೆಲೆಯೂ ಇದೆ. ಈ ಭೂಮಿಯ ಬದುಕಿನ ಅರ್ಥ ಹೀನತೆಯನ್ನು ರಾಮಜ್ಜ ತನ್ನದೇ ತಾತ್ವಿಕ ನಂಬುಗೆಯಿಂದ ಹೇಳುತ್ತಾನೆ. "ಅಲ್ಲಿರುವುದು ನಮ್ಮನೆ–ಇಲ್ಲಿರುವುದು ಸುಮ್ಮನೆ" ತತ್ವ ಅವಂದು. ಅವರು ಬದುಕುವ ವಾತಾವರಣದಲ್ಲಿ ಎಲ್ಲವೂ ಹಾಸ್ಯಾಸ್ಪದವಾಗಿ ಕಾಣುತ್ತದೆ. ಅಲ್ಲಿ ಬರುವ ನಾಟಕಗಳು ಮತ್ತಿತ್ಯಾದಿ ಸಮುದಾಯದ ವಿವರಗಳಿಂದ ಮುಸಲ್ಮಾನರ ಈ ಕುಟುಂಬವೂ ಸಮಾಜದ ಸಹಜ ಭಾಗವಾಗಿಯೇ ಇರುವುದನ್ನು ನಾವು ಗಮನಿಸಬೇಕು.

ಈ ನೀಳ್ಗತೆಯಲ್ಲಿ ಪ್ರಾಸಂಗಿಕವಾಗಿ ಬರುವ ಡಾ। ಗುರುಪಾದ ಸ್ವಾಮಿ,ಆರ್.ಎಂ.ಪಿ., ಇಡೀ ಪ್ರಪಂಚಕ್ಕೆ ಒಂದೇ ಭಾಷೆ ಇರಬೇಕೆಂದು ಪ್ರತಿಪಾದಿಸುವ ಪ್ರಸಂಗವೂ ಕುತೂಹಲಕಾರಿಯಾಗಿದೆ.ಆ ಡಾಕ್ಟರರು ಹದಿನೆಂಟು ಅಕ್ಷರಗಳಿರುವ ಒಂದು ಲಿಪಿಯನ್ನು ಕಂಡು ಹಿಡಿದಿದ್ದಾರೆ.ಅವರ ಅಕ್ಷರಗಳು ಬಾಳೆಯ ಹಣ್ಣು,ಕುಂಬಳ ಹೋಳು,ಹಾಗಲಕಾಯಿ ಹೋಳು,ಗೋಡಂಬಿ,ಬಾದಾಮು..ಹೀಗೆ ಇವುಗಳನ್ನು ಹೋಲುತ್ತವೆ. ಡಾಕ್ಟರರ ಲಿಪಿಯ ಪ್ರಕಾರ ದೀರ್ಘ ಅಕ್ಷರಗಳಿಲ್ಲ. ಅದರಂತೆಯೇ ಮಹಾ ಪ್ರಾಣಗಳಿಲ್ಲ. ಅವರು ಇಡೀ ಜಗತ್ತಿಗೆ ಒಂದೇ ಭಾಷೆ ಬರಲು ಈಗ ಕಾಲ ಪಕ್ವವಾಗಿದೆ ಅಂತ ತಿಳಿದುಕೊಂಡಿದ್ದಾರೆ. ಈ ಲಿಪಿಯನ್ನು ಎಲ್ಲಾ ಜನಾಂಗಕ್ಕೂ ಕಲಿಸಿ ಭಾಷೆಯನ್ನು ಬದಲು ಮಾಡಿ ಒಂದೇ ಭಾಷೆಯನ್ನಾಡುವಂತೆ ಮಾಡಬೇಕೆನ್ನುವುದು ಅವರ ಅಭಿಮತ.ಊರೊಳಗಿನ ಕನ್ನಡ ಶಾಲೆಯಿಂದಲೇ ಅವರ ಪ್ರಯೋಗ ಪ್ರಾರಂಭವಾಗಿದೆ.

ಈ ಕತೆಯ ಲೋಮ್ಯೆಮಟಿಕ್(ಐಠಿ ಟಜಟಾಖಿ) ನೆಲೆಯ ಭಾವ ವಿವೇಚನೆಗಳಿಗೆ ಒಂದು ತಾತ್ವಿಕ ದರ್ಶನ ನೀಡಲು ಹವಣಿಸುವ ಪ್ರಯತ್ನಗಳಲ್ಲಿ ಈ ವೈದ್ಯರ ಪಾತ್ರವೂ ಒಂದು.ಈ ಕತೆಯ ಅನೇಕ ಭಾಗಗಳಲ್ಲಿ ಪೂರ್ಣಚಂದ್ರ ತೇಜಸ್ವಿ ಹಾಗೂ ದೇವನೂರು ಮಹದೇವ ನೆನಪಿಗೆ ಬಂದರೆ ಆಶ್ಚರ್ಯವಿಲ್ಲ.

ತೇಜಸ್ವಿ ಅವರು ಶಿಷ್ಯ ಲೋಕಕ್ಕೆ ಪರಿಚಿತವಲ್ಲದ,ಮಧ್ಯಮ ವರ್ಗದ ತಾತ್ವಿಕ ಕಲ್ಪನೆಗಳಿಗೆ ಹೊರತಾದ, ಬದುಕಿನ ನೈಜ ದರ್ಶನವನ್ನು ಲೋಮ್ಯೆಮೆಟಿಕ್ ರೂಪದಲ್ಲಿ ಪ್ರತಿಪಾದಿಸುತ್ತಾರೆ.ಲೇಖಕನ ನಿರ್ಲಿಪ್ತತೆ ಆ ಇನ್ನೊಂದು ಲೋಕವನ್ನು ಸ್ವತಂತ್ರವಾಗಿ ಸಾದರ ಪಡಿಸುತ್ತದೆ. ತೇಜಸ್ವಿ ತೋರಿಸುವ ಲೋಕದಲ್ಲೂ ಲೋ ಮ್ಯೆಮೆಟಿಕ್ ಅನುಕರಣೆ ಮೂಲಕ ಕುವೆಂಪು ಸ್ಥಾಪಿಸಿದ ಮಲೆನಾಡಿನ ಲೋಕಕ್ಕೆ ಕೂಡಾ ಪರೋಕ್ಷ ಪ್ರತಿಕ್ರಿಯೆ ನೀಡುತ್ತಾರೆ ಎಂದರೂ ತಪ್ಪಲ್ಲ. ತೇಜಸ್ವಿಯವರಿಗೆ ಆ

ದೃಷ್ಟಿಯಿಂದ ಲೋ ಮೈಮೆಟಿಕ್ ಪ್ರತಿಕ್ರಿಯೆ ಲೋಕವನ್ನು ಕಾಣಿಸುವ ಕ್ರಮ. ಆ ಕಾಣಿಸುವಿಕೆಯಲ್ಲೇ ಅವರ ಕಾಣ್ಕೆಯೂ ಅಡಗಿರುತ್ತವೆ. ಆ ಬದುಕಿನ ದುರಂತವನ್ನು ಮಾತಿನಲ್ಲಿ ಕಾಣಿಸಲು ಸಾಧ್ಯವಿಲ್ಲ. ಮಾವುತ ಹಾಗೂ ಅವನಂತಹ ಅನೇಕರ ದುರಂತವನ್ನು ಮಾತಿನ ಹಂಗಿಲ್ಲದೆಯೇ 'ಕೃಷ್ಣೇಗೌಡನ ಆನೆ'ಯಂತಹ ಕತೆಗಳಲ್ಲಿ ನಗುವಿನ ನಡುವೆ ಅಡಗಿಸಿ ಕಾಣಿಸುತ್ತಾರೆ ತೇಜಸ್ವಿ.

ದೇವನೂರು ಮಹಾದೇವರ 'ಒಡಲಾಳ'ದ ದುಪ್ಪಿ ಕಮಿಷನರ್ ಕೂಡ ಅಂತಹ ಒಂದು ಲೋ ಮೈಮೆಟಿಕ್ ಪಾತ್ರವೆ. ಸಂದರ್ಭದ ವ್ಯಂಗ್ಯವೇ ದೇವನೂರರಿಗೆ ಸಹನೆಯ ಸಾಕಾರ. ಅಂತಹ ಸಹನೆಯೊಳಗಿಂದ ಮಾತ್ರ ಶಾಂತಿಯುತ ಪ್ರತಿಭಟನೆ ಸಾಧ್ಯ. ಹಿಂಸ್ರಕ ಪ್ರತಿಭಟನೆಯ ಶಕ್ತಿ ಶಾಂತಿಯುತ ಪ್ರತಿಭಟನೆಗೆ ದತ್ತವಾಗುವುದು ಸಹನೆಯ ಬಲದಿಂದ. ಸಹನೆಯಿಂದ ಸಹ್ಯವಾಗುವ, ಜೀವನವನ್ನು ಬೆಳಗಬಲ್ಲ ಸೌಂದರ್ಯ ಹಾಗೂ ತಿಳುವಳಿಕೆಯಿಂದ ಉಂಟಾಗುವ ಅರಿವಿನ ಸ್ಫೋಟ ಎರಡೂ ದೇವನೂರು ಅವರಿಗೆ ಮುಖ್ಯ. ಪ್ರತಿಭಟನೆಯಲ್ಲಿ ಬದುಕಿನ ಜೀವ ಸೆಲೆ ಬತ್ತಿ ಕಣ್ಮರೆಯಾಗಬಾರದು. ಹಾಗೆಯೇ ಜೀವನವನ್ನು ಹೇಗೋ ಕಾಪಾಡಿ, ಇನ್ನೊಂದು ಜೀವ ಹುಟ್ಟಿಸುವುದರಲ್ಲಿಯೇ ಬದುಕು ಕಳೆದು ಹೋಗಬಾರದು. ಸುತ್ತಲಿನ ಅನ್ಯಾಯಕ್ಕೆ ಕಣ್ಣ ತೆರೆದು ಪ್ರತಿಭಟಸಿ ಹೋರಾಡುವುದೂ ಸಾಧ್ಯವಾಗಬೇಕು. ಹೊಂದಿಕೊಂಡ ದಲಿತ ಬದುಕು ಹಾಗೂ ಪ್ರತಿಭಟನೆಯ ಮೂಲಕ ಬದಲಾಗುತ್ತಿರುವ ನೆಲೆಗಳು ಎರಡನ್ನೂ ಕಾಣಿಸುವಲ್ಲಿ ಕೆಲವೊಮ್ಮೆ ದೇವನೂರು ಅವರಿಗೆ ಲೋ ಮೈಮೆಟಿಕ್ ಕ್ರಮಗಳು ಸಹಕಾರ ನೀಡುತ್ತವೆ.

ಪಾಟೀಲರ ಬಾಳವ್ವ, ಬದುಕಿನ ಜೀವ ತುಂಡು. ಬಾಳು, ಬದುಕು ಎರಡೂ ಮುಖ್ಯ. ಬಾಳು ಎಂಬುದು ನಾಮಪದ ಹಾಗೂ ಕ್ರಿಯಾಪದಗಳಾಗಿ ಬಾಳವ್ವನ ಸಂದರ್ಭದಲ್ಲಿ ಅರ್ಥಪೂರ್ಣ.ಕತೆ ಪ್ರಾರಂಭವಾಗುವಾಗ, ಹೆಂಡತಿಯಾಗಿ ಅನುಭವಿಸಿದ ಬಾಳಿನ ಹಂತ ಮುಗಿದು,ಹುಸೇನಿಯ ಅವ್ವಳಾಗಿ ಅವಳ ಸಂಕಷ್ಟದ ಬಾಳು ಪ್ರಾರಂಭವಾಗಿದೆ. ಸಮಾಜದ ಕೆಳವರ್ಗದ ಈ ಲೋಕದ ಅನುಭವ ದರ್ಶನವನ್ನು ಉಳ್ಳವರ ಲೋಕಕ್ಕೆ ಕಾಣಿಸಲು ಭಾವೋತ್ಕರ್ಷದ ಹಾದಿಯನ್ನು ಬಿಟ್ಟು ನಿರ್ಲಿಪ್ತ ನಿರೂಪ'ಕನ ಮೂಲಕ ಹೇಳುವ ಪ್ರಯತ್ನಕ್ಕೆ ಲೇಖಕರು ಇಳಿಯುತ್ತಾರೆ. ನಿರ್ಲಿಪ್ತತೆಗೆ ವ್ಯಂಗ್ಯದ ಮೊನಚನ್ನು ಆವಾಹಿಸಿಕೊಳ್ಳಲು ಅವರು ಅನುಸರಿಸಿದ್ದು 'ಲೋಮೈಮೆಟಿಕ್ ವಿಧಾನ'. ಒಂದು ರೀತಿಯಲ್ಲಿ ಅದೊಂದು ನಿರೂಪಣಾ ತಂತ್ರವೂ ಹೌದು.

ಕತೆಯೊಳಗೆ ಒಬ್ಬರ ಲೋಕ ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ಕ್ರಿಯೆಯಲ್ಲಿ ಒಳಗೊಂಡಾಗ ಮಾತ್ರ ಒಂದು ಲೋಕ ಇನ್ನೊಂದು ಲೋಕದ ಸಂಪರ್ಕಕ್ಕೆ ಬರುವುದು. ಮನೆ ಕೆಲಸಕ್ಕೆ ಬಾಳವ್ವ ಅನಿವಾರ್ಯ. ಆದ್ದರಿಂದ ಮಾತ್ರ ರಾಯರ ಲೋಕದೊಳಗೆ ಪ್ರವೇಶ. ಪಕ್ಕಪಕ್ಕದಲ್ಲೇ ಹೀಗೆ ಬದುಕಿದ್ದೂ ಒಬ್ಬರು ಇನ್ನೊಬ್ಬರಿಗೆ ಅರ್ಥವಾಗ'ದೆ ಇರುವುದಕ್ಕೆ ಕೇವಲ ಆರ್ಥಿಕ ಸಂಬಂಧಗಳು ಮಾತ್ರ ಕಾರಣವೆ? ಅಥವಾ ಅದರಾಚೆಗಿನ ಇನ್ನೇನಾದರೂ ಕಾರಣಗಳಿವೆಯೆ? ಅಂತಹ ಸಾಧ್ಯತೆಗಳ ಒಂದು ಪರೀಕ್ಷೆ, ಡಾ। ಗುರುಪಾದ ಸ್ವಾಮಿಯವರ ಪ್ರಪಂಚಕ್ಕೆ ಒಂದೇ ಭಾಷೆ ಇರಬೇಕೆಂಬ ಕಲ್ಪನೆ. ನವ್ಯ ಮನೋಲೋಕದಿಂದ ಹೊರಳಿಕೊಳ್ಳುತ್ತಿದ್ದ ಕಾಲದಲ್ಲಿ ಆಶಯವನ್ನು ಕೇವಲ ಸಾಂಕೇತಿಕ ನೆಲೆಗಳಲ್ಲಿ ಮಾತ್ರ ಪ್ರತಿಷ್ಠಾಪಿಸುವುದರಲ್ಲಿ ಪಾಟೀಲರಿಗೆ ಆಸಕ್ತಿ ಇಲ್ಲ. ಆದ್ದರಿಂದ ತನ್ನ ತಾತ್ವಿಕ ಶೋಧನೆಗೂ ಡಾಕ್ಟರರನ್ನು ತುಸು ಕೋಡಂಗಿಯಂತೆ ಕಾಣಿಸಿ, ಲೋ ಮೈಮೆಟಿಕ್ ಸಾಧ್ಯತೆಯ ಇನ್ನೊಂದು ಪರೀಕ್ಷೆಗೆ ಪಾಟೀಲರು ಪ್ರಯತ್ನಿಸುತ್ತಾರೆ.

'ಬಾಳವ್ವನ ಕನಸುಗಳು' ಕತೆಯ ನಂತರ ಪಾಟೀಲರು ಇಂತಹ ಪ್ರಯೋಗಕ್ಕೆ ಮುಂದಾಗಲಿಲ್ಲ. ಆ ಬಳಿಕದ ಕತೆಗಳಲ್ಲಿ ತೇಜಸ್ವಿ ಅವರ ಛಾಯೆಯೂ ಹೊರಟು ಹೋಯಿತು. ಆ ಬಳಿಕ ಅವರು ಮಾಯಾ ವಾಸ್ತವದ (ಒಚಿಢಿಛಿ ಖಜಚಿಟಿಝುು) ಪ್ರಯೋಗಗಳಿಗೆ ಹೆಚ್ಚು ಹತ್ತಿರವಾದರು.ನವ್ಯ ಶೈಲಿಯಲ್ಲಿದ್ದಿದ್ದರೆ ಒಬ್ಬ ವಿಕ್ಷಿಪ್ತ ವ್ಯಕ್ತಿಯಂತೆ ಚಿತ್ರಿತವಾಗಬಹುದಾಗಿದ್ದ ಡಾ। ಗುರುಪಾದ ಸ್ವಾಮಿಯಂತಹ ಪಾತ್ರ, ಹಾಸ್ಯ ಮಿಶ್ರಿತ ಕೋಡಂಗಿಗೆ ಹತ್ತಿರವಾದವನಂತೆ ಕಾಣಿಸುತ್ತಾನೆ. ತೇಜಸ್ವಿ ತಮ್ಮ ಅಬಚೂರಿನ ಪೋಸ್ಟ್ ಆಫೀಸು ಸಂಕಲನದ ಮೊದಲ ಮಾತಿನಲ್ಲಿ ಸ್ಪಷ್ಟವಾಗಿ ನವ್ಯರಿಂದ ಬೇರಾಗಬೇಕಾಗುವ ಅನಿವಾರ್ಯತೆ

ಬಗ್ಗೆ ಮಾತನಾಡಿ ಸಮುದಾಯದ ಹಾಗೂ ಸ್ಥಿತ್ಯಂತರದ ಕತೆಗಳನ್ನು ಬರೆಯ ತೊಡಗಿದ್ದರು. ಬದುಕಿನ ಮಾಯೆ ಏನು? ಮತ್ತು ಅದರ ದರ್ಶನ ಹೇಗೆ? ಎಂಬ ನಿಟ್ಟಿನ ಶೋಧನೆಯಲ್ಲಿ ತೇಜಸ್ವಿ ಲೋ ಮೈಮೆಟಿಕ್ ಪ್ರಯತ್ನಕ್ಕೆ ಮುಂದಾದರು.

ತಮ್ಮ 'ಒಡಪುಗಳು' ಸಂಕಲನದಲ್ಲಿ ಸಂಪೂರ್ಣ ನವ್ಯ ಶೈಲಿಯಲ್ಲಿ, ನವ್ಯರ ಆಧುನಿಕ ಮನೋಭಾವದಲ್ಲಿದ್ದ ರಾಘವೇಂದ್ರ ಪಾಟೀಲರು 'ಪ್ರತಿಮೆಗಳು' ಸಂಕಲನದಲ್ಲಿ 'ವ್ಯಕ್ತಿ' ಕೇಂದ್ರಿತ ನೆಲೆಗಳನ್ನು ಬಿಟ್ಟು ಕುಟುಂಬ ಹಾಗೂ ಸಮಾಜಗಳ ಮೂಲಕ ಸಮುದಾಯದ ನೆಲೆಗಳನ್ನು ಶೋಧಿಸ ತೊಡಗಿದ್ದರು. ಚರಿತ್ರೆ ಹಾಗೂ ಪರಂಪರೆಗಳ ಸ್ಪಷ್ಟ ರೂಪುಗಳು ಆಗಿನ್ನೂ ಅವರ ಬರಹಗಳಲ್ಲಿ ಹರಳು ಕಟ್ಟಿರಲಿಲ್ಲ. ವ್ಯಕ್ತಿ ಹಾಗೂ ಕುಟುಂಬದ ಆಚೆಗಿನ ಜೀವ ಸತ್ಯಗಳ ಶೋಧ ಎಲ್ಲಿ? ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸ್ಪಷ್ಟವಾಗದಿದ್ದ ಕಾಲದಲ್ಲಿ ನಡೆದ ಒಂದು ಪ್ರಯೋಗ ಲೋ ಮೈಮೆಟಿಕ್ ಪ್ರಯತ್ನ. ಸಮಾಜದ ಕೆಳಸ್ತರದ ಬಾಳವ್ವನ ಮೂಲಕ, ಅವಳ ಕನಸುಗಳ ಮೂಲಕ, ತಾನು ನೇರವಾಗಿ ವ್ಯವಹರಿಸುವ ಸಮಾಜದ ಆಚೆಗಿನ ಜೀವಗಳ ದರ್ಶನವನ್ನು ಹುಡುಕುವ ಪ್ರಯೋಗ ಅದು. 'ಒಡಪುಗಳು' ಕತೆಯಲ್ಲಿ 'ಹನುಮಿ' ಜೊತೆಗೆ ಇದ್ದಿರಬಹುದಾದ ಅಸ್ಪಷ್ಟ ಲೈಂಗಿಕ ಆಕರ್ಷಣೆ ನಿರೂಪಕನಾದ ಕಥಾ ನಾಯಕನಿಗೂ ಅಸ್ಪಷ್ಟ. ಅದೇ ರೀತಿ 'ಬಾಳವ್ವನ ಕನಸುಗಳು' ಕತೆಯ ನಿರೂಪಕನಿಗೂ ಅಸ್ಪಷ್ಟ. ಅದನ್ನು ಸ್ಪಷ್ಟವಾಗಿ ಕಾಣಲು, ತಿಳಿಯಲು ನಡೆಸಿದ ಲೋ ಮೈಮೆಟಿಕ್ ಪ್ರಯೋಗ, ಆ ಬಳಿಕ ಪಾಟೀಲರಲ್ಲಿ ಮುಂದುವರಿಯಲಿಲ್ಲ ಎಂಬುದನ್ನು ನಾವು ಗಮನಿಸಬೇಕು.

'ಕಥಿಯ ಹುಚ್ಚಿನ ಕರಿ ಟೊಪಿಗಿಯ ರಾಯ' ಹಾಗೂ 'ದೇಸಗತಿ' ಕತೆಗಳು ಮುಂದೆ ಸಂಯುಕ್ತವಾಗಿ 'ತೇರು' ಕಾದಂಬರಿಯಾಗಿ ಬೆಳೆಯಿತು. ಇಲ್ಲಿ ಕರಿಟೊಪಿಗೆಯ ರಾಯ ಭೂ ಸುಧಾರಣಾ ಕಾನೂನು ಬಂದ ಬಳಿಕವೂ ಕಾನೂನು ಕಟ್ಟೆ ಹತ್ತಿ, ತನ್ನ ಜಮೀನ್ದಾರಿ ಲೋಕ, ಪ್ರಾಪ್ತಿ, ಸಂಸ್ಕೃತಿ ಉಳಿಸಿಕೊಳ್ಳಬೇಕು ಎಂದು ಪ್ರಯತ್ನಿಸುತ್ತಾನೆ. ರಾತ್ರಿ, ಕಥಾ ನಿರೂಪಕನ ಕಾಲೊತ್ತಲು ಅವರು ಹೆಣ್ಣೊಬ್ಬಳನ್ನು ಕಳುಹಿಸುವುದೂ ಅದೇ ಪಾಳೇಗಾರೀ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದು. ಎಲ್ಲವೂ ಆಸ್ತಿ ಅನುಭೋಗಿಸುವ ಒಡೆತನಕ್ಕೆ ಸೇರಿದ್ದು. ಆದರೆ ವ್ಯಕ್ತಿಯ ಶಾಶ್ವತದ ಆಸೆ ಮನೆತನದ ಕತೆ ಬರೆಯಲು ಪ್ರೇರೇಪಿಸುವುದರಲ್ಲಿ ಗೋಚರಿಸುತ್ತದೆ. ಕಮತಾರ ಚನ್ನಪ್ಪನಿಗೆ ಆ ಕ'ತೆಯೊಳಗೆ ಅಂಗಡಿ ಕುಬೇರನನ್ನು ಖೂನಿ ಮಾಡಿದ ಕತೆಯ ಮೂಲಕ ತಾನೂ ಸೇರಬೇಕೆಂಬ ಆಸೆ. ಚರಿತ್ರೆ ಕತೆ ಮೂಲಕ ಹರಿದು ಜೀವನ ಕ್ರಮದ, ಆಚರಣೆಗಳ ಭಾಗವಾಗಿ ಉಳಿಯುವ ಅನೇಕ ಸಂದರ್ಭಗಳು ಈ ಬಳಿಕ ಪಾಟೀಲರು ರಚಿಸಿದ ಅನೇಕ ಕತೆಗಳಲ್ಲಿವೆ. 'ದೇಸಗತಿ'ಯಲ್ಲಿ, ಬದಲಾದ ಸಂದರ್ಭದಲ್ಲಿ ಸೃಷ್ಟಿಸಿದ ಕತೆಯೇ ಮುಂದೆ ಆಚರಣೆಯ, ಪರಂಪರೆಯ ಭಾಗವಾಗಿ ಬೆಳೆಯುತ್ತದೆ. ಚರಿತ್ರೆಯಲ್ಲಿ ಸೇರುವ ಸುಳ್ಳಿನ ಬೀಜವೂ, ವ್ಯವಸ್ಥೆಯ ಹುನ್ನಾರವೂ ಕೊಲೆಗಾರನು ವೀರ ನಾಯಕನಾಗಿ ಪರಿವರ್ತನೆಗೊಳ್ಳುವುದರಲ್ಲಿ ಸೇರಿದೆ. ಪೇಶ್ವೆಗಳ ಕೈಗೆ ಸಿಕ್ಕಿ ಗಲ್ಲಿಗೇರಬೇಕಾಗಿದ್ದ ವೆಂಕೊಬರಾವನು ಧರಮನಟ್ಟಿಯ ದೇಸಾಯಿ ಆಗಿ ಬೆಳೆಯುತ್ತಾನೆ. ಕತೆಯನ್ನು ತಿರುಚಿ ಚರಿತ್ರೆ ಕಟ್ಟಬಲ್ಲ ತ್ರಿಯಂಬಕ ಭಟ್ಟ ಕಾರಬಾರಿಯಾಗಿ ದೇಸಗತಿ ಕಟ್ಟುತ್ತಾನೆ.

ಹೀಗೆ ವ್ಯವಸ್ಥೆಯ ಸೃಷ್ಟಿಯಲ್ಲೆ ಚರಿತ್ರೆಯೊಳಗೆ ಸೇರುವ ಸುಳ್ಳಿನ ಬೀಜಗಳನ್ನು ವರ್ತಮಾನದಲ್ಲಿ ಪರೀಕ್ಷಿಸುವುದು ಹೇಗೆ? ಆಚರಣೆಯಲ್ಲಿ ಅದಕ್ಕೆ ಸವಾಲೆಸೆಯುವುದು ಒಂದು ಸಾಧ್ಯತೆಯೇ? 'ತುದಿಯೆಂಬೋ ತುದಿಯಿಲ್ಲ' ಕತೆಯಲ್ಲಿ ಶಾಯರಿ ಮೂಲಕ ಆಚರಣೆಯ ಹಿನ್ನೆಲೆಯಲ್ಲಿ ಚರಿತ್ರೆಯನ್ನು ತಾತ್ವಿಕವಾಗಿ ಪರೀಕ್ಷಿಸುವ ಪ್ರಯತ್ನ ನಡೆದಿದೆ.

'ಬೆಳಕ್ಕಿಗಳ ಲೋಕದಲ್ಲಿ' ಕತೆಯೊಳಗೆ ವ್ಯಕ್ತಿ ಸಮುದಾಯ ಹಾಗೂ ನೆನಪುಗಳ ಪರಸಪ್ಪರ ಸಂಬಂಧವಿದೆ. ಅದು ಎರಡು ನೆಲೆಗಳಲ್ಲಿ, ಅಂದರೆ ಗಂಡು ಹೆಣ್ಣುಗಳ ನಡುವೆ ಮತ್ತು ವ್ಯಕ್ತಿ ಹಾಗೂ ಸಮಾಜದ ಪ್ರತಿನಿಧಿಗಳ ಸಂಬಂಧಗಳಲ್ಲಿ ತೆರೆದುಕೊಳ್ಳುತ್ತದೆ. ದಲಿತರ 'ಸಂತ್ರಾಮ', ಕಾಲೇಜಿನಲ್ಲಿ ಓದುವಾಗ ಎಸ್.ರಾಮ ಎಂದು ತನ್ನ ಹೆಸರು ಬದಲಾಯಿಸುತ್ತಾನೆ. ಆ

ಮೂಲಕ ತನ್ನ ವ್ಯಕ್ತಿತ್ವವನ್ನು ಹೊಸ ಪರಿಸರದಲ್ಲಿ ಹೊಸದಾಗಿ ಕಟ್ಟಿಕೊಳ್ಳುತ್ತಾನೆ. ಆದರೆ ಅವನ ಚರಿತ್ರೆಯ ಹಳೆಯ, ವಾಸ್ತವ ಹಾಗೂ ಅದರ ನೆನಪುಗಳು ಅಲ್ಲಿಯೂ ಬಿಡದೆ ಅವನ ಬೆಂಬತ್ತುತ್ತದೆ.

ಗೀತಾಳ ಅಪ್ಪನಿಂದಾದ ಅವಮಾನದ ಸಂದರ್ಭದಲ್ಲಿ ಎಸ್.ರಾಮ ಅಲಿಯಾಸ್ ಸಂತ್ರಾಮ ಅಪಮಾನದಿಂದ ಕುದ್ದು, ಭದ್ರಗೌಡನಿಗೆ ಬೆಂಕಿ ಹಚ್ಚಿ ಸುಟ್ಟು ಬಿಡುವಷ್ಟು ಸಿಟ್ಟಿಗೆ ಒಳಗಾಗುತ್ತಾನೆ. ಆಗ ಅವನಿಗೆ ಅನಿಸುವುದು "ಇವನದು ಕಾಂಕ್ರೀಟಿನ ಮನಿ...ಸುಡುವುದಿಲ್ಲ ಸುಟ್ಟರೆ ಇವನನ್ನೇ ಸುಡಬೇಕು...ಗೀತಾನ ನೆನಪು ಬಂತು".

ಮುಂದೆ ಗೀತಾ ಅವನ ಹಾಸ್ಟೆಲಿಗೆ ಬಂದು 'ಸಾರೀರೀ ಅಂತ ಆಳವಾದ ಧ್ವನಿಯಿಂದ ಹೇಳಿದಾಗ ಸಂತ್ರಾಮನಿಗೆ ಯಾಕೋ ಏನೋ ಇನ್ನಷ್ಟು ಅಪಮಾನ ಆದಂಗ ಆತು. ನೋಡರೀ ನಾನು ಹೊಲ್ಯಾರಾಂವ... ನಮ್ಮ ಅಪ್ಪ ಹೊಲ್ಯರಾಂವಾ...ನೀವೂ..ನೀವು ಲಿಂಗಾಯ್ತರು..ನಿಮ್ಮಪ್ಪ...ಭದ್ರಗೌಡ್ರು...ಏ...ನಿಮ್ಮ ಸುದ್ದಿ ಬ್ಯಾಡ ಬಿಡರಿ..ಅಂತ ತನ್ನ ಅಪಮಾನಕ್ಕೆ ಒರಟೊರಟಾಗಿ ತರ್ಕಾತೀತವಾದ ಮಾತಿನ ರೂಪ ಕೊಟ್ಟು, ಸಿಟ್ಟಿನಿಂದ ಬೆವತಿದ್ದ ಮಕವನ್ನು ಕರ್ಚೀಪಿನಿಂದ ಒರೆಸಿಕೊಂಡ...'.

ವ್ಯಕ್ತಿ, ಸಮುದಾಯ, ಚರಿತ್ರೆ ಹಾಗೂ ನೆನಪುಗಳು ಇಲ್ಲಿ ಪರಸ್ಪರ ಎದುರಾಗುತ್ತವೆ. ಮುಂದೆ ಅವನು ಮನೆ, ಕಷ್ಟ ಪಟ್ಟು ಮಾಡಿದ ಹೊಲ–ಭಾವಿ ಎಲ್ಲಾ ಕಳೆದುಕೊಂಡು ಶೋಷಣೆಗೆ ಒಳಗಾಗುತ್ತಾನೆ. ಪಾಳೇಗಾರಿ ಭೂ ಮಾಲೀಕರ ಪರವಾಗಿ ರಾಜ್ಯ ವ್ಯವಸ್ಥೆಯ ಪೋಲೀಸರೂ ನಿಂತು ಸಂತ್ರಾಮನ ಕುಟುಂಬ, ಕಷ್ಟ ಪಟ್ಟು ಸಂಪಾದಿಸಿದ್ದನ್ನೆಲ್ಲಾ ಕಳೆದುಕೊಳ್ಳುತ್ತದೆ. ಸಂತ್ರಾಮ, ಎಸ್.ರಾಮನಾಗಿ ಪರಿವರ್ತನೆಗೊಂಡರೂ ಅವನ ಹಿಂದಿನ ಚರಿತ್ರೆಯಿಂದಾಗಿ ಊರಲ್ಲಿ ಅವನ ನೆಲ,ಹೊಲ,ಮನೆ,ಕಿತ್ತು ನಿರ್ಗತಿಕರನ್ನಾಗಿ ಮಾಡುತ್ತದೆ.ಚರಿತ್ರೆ ಹಾಗೂ ಆಚರಣೆಗಳಿಗೆ ವರ್ತಮಾನದಲ್ಲಿ ಸರಳ ಪರಿಹಾರಗಳಿಲ್ಲ.

'ಲಯ...'ಕತೆ ಬರೆಯುವಷ್ಟರ ಹೊತ್ತಿಗೆ ಮಾಯಾ ವಾಸ್ತವವಾದ ಪಾಟೀಲರ ಕತೆಗಳನ್ನು ಸ್ಪಷ್ಟವಾಗಿ ಪ್ರವೇಶಿಸಿದೆ.ಮಳೆ ಇಲ್ಲದೆ ನೀರು ಇಲ್ಲದೆ ಹಳ್ಳಿ ಜನ ಹಾಹಾಕಾರ ಎದ್ದು ನೀರಿಗಾಗಿ ದೂರದಿಂದ ಲಂಗಟ ಸ್ವಾಮಿಗಳನ್ನು ಕರೆತರುತ್ತಾರೆ.ಲಂಗೋಟಿಯಲ್ಲಿರುವ ಈ ಸ್ವಾಮಿ ಸಿದ್ಧರು. '...ಅವರು ಸುತ್ತಲಿಂದರೊಳಗ ಕರಗಿಧಂಗ ಇರತಾರು'. ಅಂತಹ ಸ್ವಾಮಿಗಳು ಊರಿಗೆ ಬಂದು ಕೇಳುವುದು ಹಾಡಕಟ್ಟುವ ಹುಡುಗನನ್ನ. ಮಳೆಯಾಗಬೇಕಾದರೆ, ಜೀವ ಬೆಳಿಬೇಕಾದರೆ ಹಾಡುಕಟ್ಟುವ ಹುಡುಗ ಬೇಕು...ಕೊನೆಗೂ ಊರ ಹುಡುಗ ನಾಣಿಯ ನೆನಪಲ್ಲಿ, ಅವನ ಹಾಡುಕಟ್ಟುವ ಪ್ರತಿಭೆಯ ಆಸೆಯಲ್ಲಿ ಕತೆ ಮುಗಿಯುತ್ತದೆ.

ಕಳೆದು ಕೊಳ್ಳುವುದಕ್ಕೂ ಉಳಿಸಿಕೊಳ್ಳುವುದಕ್ಕೂ ನಡುವೆ ಸೇತುವೆ ಕಟ್ಟಬಲ್ಲದ್ದು ಹಾಡು. ಅದರ ಲಯದಲ್ಲಿ ಒಂದು ಆವರ್ತನ ಇದೆ.ಅಂತಹ ಆವರ್ತನದಲ್ಲಿ ವರ್ತಮಾನ ಮತ್ತು ಚರಿತ್ರೆ ಸಾದೃಶ್ಯವನ್ನು ಕಾಣುತ್ತದೆ. ಒಂದು ಕಳೆದುಹೋದಾಗ ಮತ್ತೊಂದು ಹುಟ್ಟುತ್ತದೆ. ಈ ತತ್ವದ ತಾರ್ಕಿಕ ಪ್ರಯತ್ನ ಚರಿತ್ರೆ–ವರ್ತಮಾನಗಳ ಸಂಬಂಧದಲ್ಲಿ, ಯಾವುದನ್ನು ಹೇಗೆ ಕಳೆದುಕೊಳ್ಳುವುದು ಮತ್ತು ಏನು ಹುಟ್ಟುವುದು ಎಂಬುದಾಗಿರುತ್ತದೆ.ಅದರ ಅನೇಕ ಕೋನಗಳ ಪ್ರಯತ್ನಶೀಲ ಪ್ರಯೋಗದಂತೆ 'ತೇರು' ರೂಪು ಗೊಂಡಿದೆ.ಅಂತಹ ದೇಸಗತಿಯ ರಕ್ತ ತಿಲಕದ ಚರಿತ್ರೆ ಹಾಗೂ ವರ್ತಮಾನದ 'ದ್ಯಾವಪ್ಪ'ನ ಆದರ್ಶ ಅಲ್ಲಿ ಎದುರುಬದುರಾಗುತ್ತದೆ.ಚರಿತ್ರೆ ಹಾಗೂ ವರ್ತಮಾನ, ಪರಂಪರೆಯಿಂದು ಬಂದ ಸಂಪ್ರದಾಯ ಹಾಗೂ ಆಧುನಿಕ ಮನಸ್ಸಿನಲ್ಲಿ ಚಿಗುರಿದ ಆದರ್ಶ ಇವು ಎದುರು ಬದುರಾಗುತ್ತವೆ. ದ್ಯಾವಪ್ಪ ಹಾಗೂ ಬಾಳವ್ವ ಇವರ ಸಂಬಂಧದಲ್ಲಿ ಅವರ ಮಿಲನವಾಗದೆ ದೂರವಾಗಿಯೇ ಉಳಿಯುವುದು, ಅರಿವಿನ ಸ್ಫೋಟವನ್ನು ಉಂಟಮಾಡದೆ ಸಂದರ್ಭದ ಸಂಗ್ರಹ ಗುಣಕ್ಕೆ ನಮ್ಮನ್ನು ಪ್ರೇರೇಪಿಸುತ್ತದೆ.

ಪಾಟೀಲರ ಗ್ರಹಿಕೆ ಸ್ಫೋಟ ಗುಣಕ್ಕಿಂತಲೂ ಹೆಚ್ಚು ಮಾಗುವ, ಸಂಗ್ರಹ ಗುಣಕ್ಕೆ ಒಲಿದಿರುವಂತಹದ್ದು. ಅನುಭವವು ರೂಪಕವಾಗುವ ಹಾಗೂ ರೂಪಕವು ಅನುಭವವಾಗುವ ಅಂಶ ಅವರನ್ನು ಕಾಡಿದೆ:

'ಖರೇ ಹಕೀಕತ್ತು ಮತ್ತು ಕಲ್ಪನಾಗಳ ನಡುವ ಎಷ್ಟು ಅಂತರ ಇದ್ದೀತು ಅನ್ನೋ ವಿಚಾರ ಭಾಳ ತೊಡಕಿನದನಸತದ...ಒಮ್ಮೊಮ್ಮೆ ಕಥೀ ಹೇಳತ್ತಿದ್ದರ ಖರೇ ಹಕೀಕತ್ತು ಹೇಳಿದಂಗನಿಸಿದರ ಇನ್ನ ಒಮ್ಮೊಮ್ಮೆ ವಾಸ್ತವ ವಿಚಾರ ಹೇಳತಿದ್ದರೆ, ಕಥೀ ಹೇಳದಂಗ–ಸುಳ್ಳು–ಸುಳ್ಳು ಅನಸತದ'. (ಕಥಿಯ ಹುಚ್ಚಿನ ಕರಿಟೊಪಿಗಿಯರಾಯ ಕತೆಯ ಪ್ರಾರಂಭ).

ಹಾಗೆಂದು ಚರಿತ್ರೆಯ ಅನುಭವ ವರ್ತಮಾನಕ್ಕೆ ಅಂಕಿ ಅಂಶಗಳ ಮಾಹಿತಿಯಾಗಿ ಹರಿದು ಬರುವಂತಿಲ್ಲ. ಅದು ನಮ್ಮ ಇಂದಿನ ಅನುಭವದೊಳಗೆ ಇರಬೇಕಾದರೆ ಅದು ನಮ್ಮ ನೆನಪಲ್ಲಿ ಸೇರಬೇಕು. ಹಾಗೆ ಸ್ಮೃತಿಯಾಗುವ ಕೆಲಸಕ್ಕೆ ಕಥೆಯಾಗಬೇಕು. ಕಥಿಯಾದಾಗ ಸುಳ್ಳು ಅನಿಸುವ ಸಮಸ್ಯೆ. ಹಾಗಾಗದಿದ್ದರೆ ದಕ್ಕಲಾರದ ಅನುಭವ!

ಇದರ ಒಂದು ಪ್ರತ್ಯಕ್ಷ ಉದಾಹರಣೆ ಧರಮನಟ್ಟಿಯ ವರ್ತಮಾನದ ದೇಸಾಯರಾದ ಕಲ್ಪನಾಥರು. ದೇಸಗತಿ ಉಳಿಸೋದು ಬಿಡೋದು ಮನೆದೇವರಾದ ಪಂಡರಪುರದ ವಿಠಲನಿಗೆ ಸೇರಿದ್ದು ಎಂದು ನಂಬಿದವರು ಅವರು. ಹೀಗೆ ದೇವರ ಮ್ಯಾಲ ಭಾರ ಹಾಕಿದ ಬಳಿಕ ಅವರ ನಿತ್ಯದ ಕೆಲಸ ಅಂದರೆ ಧರಮನಟ್ಟಿನೊಳಗೆ ದೇಸಗತೀ ಕಟ್ಟಿದ ತಮ್ಮ ಅಜ್ಜನ ಅಜ್ಜಗಳ ಕಥಿಯ ಭೂತಕಾಲದೊಳಗೆ ಸಂಚಾರ ಮಾಡೂದು.

'...ಯಾವಾಗ ಬೇಕೋ ಆವಾಗ ಕಲ್ಪನಾಥ ದೇಸಾಯರು ಅದನ್ನ ತಮ್ಮ ಕಣ್ಣ ಮುಂದ ತಂದುಕೋತಾರ... ಹೆಂಗಪಾ$ ಅಂದ್ರ...ಬೇಕಾದ ಪುಟಾ ತಗದು ಓದಲಿಕ್ಕೆ ಬರುವ ಪುಸ್ತಕ ಓದಿದಂಗ...ಮೊದಲು ತೊಂಬತ್ತಾರನೇ ಪುಟಾ ಓದಿ ಆದಮ್ಯಾಲ ಹದಿಮೂರನೇ ಪುಟಾ ಓದಬಹುದು ನೋಡ್ರಿ...ಹಂಗ! ಓದೂದು ಬ್ಯಾಡಾತಂದರ ನೀವು ಈ ಕಥೀ ಮುಚ್ಚಿ ಇಟ್ಟ ಬಿಡತೀರೆಲಾ...ಹಂಗ !' (ದೇಸಗತಿ–ಕಥೆಯಲ್ಲಿ).

ಚರಿತ್ರೆ ನೆನಪಿಗೆ ಸೇರುವ ಪ್ರಶ್ನೆಯೇ ಮಾಗುವ ಸಂಗ್ರಹ ಗುಣಕ್ಕೆ ಪೂರಕ. ವರ್ತಮಾನಕ್ಕೆ ಒಂದು ಆವರ್ತನ ಲಯವಿದ್ದು, ಅದು ಚರಿತ್ರೆಯ ಜೊತೆ ಸೇರಿದ ಮುಂದುವರಿಕೆಯಾಗಬಹುದು. ಅಥವಾ ವರ್ತಮಾನ ಸಾಗುವ ಭವಿಷ್ಯತ್ತಿನ ಚಲನೆಯಲ್ಲಿ ಚರಿತ್ರೆಯನ್ನೂ ಮುಂದುವರಿಸಬಹುದು.ಈ ಎರಡೂ ಪ್ರಕ್ರಿಯೆಗಳಲ್ಲಿ ಇರುವ ನಂಬುಗೆ ಮಾಗುವ ಗುಣಕ್ಕೆ ಪೂರಕ.

ಪಾಟೀಲರಿಗೆ ಮನುಷ್ಯನ ಸ್ಫೋಟಕ ಗುಣದಲ್ಲಿ ನಂಬುಗೆ ಇಲ್ಲ ಎಂದು ಈ ಮೊದಲೆ ಸೂಚಿಸಿ ಆಗಿದೆ. ಉದಾಹರಣೆಗೆ ಅನಂತಮೂರ್ತಿಯವರ ಸಂಸ್ಕಾರದಲ್ಲಿ ಪ್ರಾಣೇಶಾಚಾರ್ಯರು ಚಂದ್ರಿಯನ್ನು ಕೂಡಿದ ಕ್ಷಣದಲ್ಲಿ ಉಂಟಾಗುವ ಅಸ್ತಿತ್ವದ ಅರಿವಿನ ಸ್ಫೋಟದಂತಹ ಘಟನೆಗಳು ಪಾಟೀಲರಲ್ಲಿ ಕಾಣಲು ಸಾಧ್ಯವಿಲ್ಲ.'ತೇರು' ಕಾದಂಬರಿಯಲ್ಲಿ ದ್ಯಾವಪ್ಪ ವಿಧವೆ ಬಾಳವ್ವನಲ್ಲಿ ಅನುರಕ್ತನಾಗುತ್ತಾನೆ.ಆದರೂ ಅವಳನ್ನು ಕೂಡುವ ಬಗ್ಗೆ ಅವನು ತುಡಿಯುವುದಿಲ್ಲ. ಬಾಬಾ ಆಮ್ಟೆಯವರ ಆಶ್ರಮ ಸೇರುವ ದ್ಯಾವಪ್ಪ ಸಂಬಂಧ ಮತ್ತು ಪ್ರೀತಿಯ, ಮನಸ್ಸಿಗೆ ಸಂಬಂಧ ಪಟ್ಟ ಮುಖವನ್ನು ಮಾತ್ರ ಕಾಣುವವ. ದೇಹದ ಆಸೆಗಳನ್ನು ಅದುಮಿ ಇಡಬಲ್ಲ ಆದರ್ಶದವ. ತಾನು ಬಯಸಿದ ಆದರೆ ಕೂಡದ ಬಾಳವ್ವನ ಸಂಸಾರದ ಜವಾಬ್ದಾರಿ ಹೊತ್ತು ಮದುವೆಯಾದ ಗಂಡನಂತೆ ಪ್ರತಿ ತಿಂಗಳು ಸಂಸಾರದ ಖರ್ಚಿಗೆ ಹಣ ಕಳುಹಿಸುತ್ತಾನೆ. ಬದುಕಿನ ವಿಭಿನ್ನ ಮುಖಗಳನ್ನು ಪರೀಕ್ಷೆಗೆ ಒಡ್ಡುವುದೂ ಮಾಗುವ ಕ್ರಿಯೆಯ ಒಂದು ಭಾಗವೇ ಆಗಿದೆ.

ಈ ತನಕ ಚರ್ಚಿಸಿದ ಕತೆಗಳಲ್ಲಿ ವ್ಯಕ್ತಿ ಸಮುದಾಯ ಹಾಗೂ ಚರಿತ್ರೆಗಳ ನಾನಾ ನೆಲೆಗಳನ್ನು ಪರೀಕ್ಷಿಸಿದ್ದೇವೆ. ಈ ಮೂರರ ಕೂಡುಬಿಂದು ಕತೆ ನಡೆಯುವ ಕಾಲವಾಗಿ ಸದಾ ವರ್ತಮಾನ–ಭೂತದ ದಾಖಲೆ ಅಥವಾ ಭವಿಷ್ಯದ ಸೂಚನೆ

ಇದ್ದಾಗಲೂ ವರ್ತಮಾನದ ಲಯಗಳೇನು ಎಂಬುದೂ ಪಾಟೀಲರ ತಾತ್ವಿಕತೆಯ ಗ್ರಹಿಕೆಗೆ ಮುಖ್ಯವಾದದ್ದು. ಈ ದೃಷ್ಟಿಯಿಂದ ಅವರ 'ಮಾಯಿಯ ಮುಖಗಳು' ಕನ್ನಡದ ಮಹತ್ವವಾದೊಂದು ಕತೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಬಹುಕಾಲ ಉಳಿಯಬಲ್ಲ 'ಮಾಯಿಯ ಮುಖಗಳು' ಕತೆ ಅದರ ಸಾಂಕೇತಿಕತೆ ಹಾಗೂ ಪ್ರಾತಿನಿಧಿಕ ಸ್ವರೂಪದಿಂದ ಓದುಗನಲ್ಲಿ ಕಾವ್ಯದ ಲಹರಿಯನ್ನು ಸೃಜಿಸುತ್ತದೆ. ಲೌಕಿಕದ ಕತೆ ಹೇಳುತ್ತಾ ಸಂಗೀತದ ಭಾವ ಲೋಕದ ಮೂಲಕ ಅಲೌಕಿಕವಾದ ಅನುಭವವನ್ನು ಅರಸುವ ಕತೆ ಇದು. ಬದುಕಿಗೆ ಅಂತರಂಗ ಬಹಿರಂಗಗಳೊಡನೆ ಸಾವಯವ ಸಂಬಂಧ ಇದೆ. ಆ ಅನುಭವ ಅದರ ಪರಿಪೂರ್ಣತೆಯಲ್ಲಿ ಅನುಭಾವವಾಗಿ ಪರಿವರ್ತನೆಗೊಳ್ಳಬಹುದೆ ಎಂಬುದನ್ನು ಹುಡುಕಲು ಸಂಗೀತದ ರೂಪಕಗಳನ್ನೂ, ಸಾಂಕೇತಿಕ ವಿವರಣೆಗಳನ್ನು ಪಾಟೀಲರು ಬಳಸುತ್ತಾರೆ. ಕತೆಯ ಕೊನೆಯ ಭಾಗದಲ್ಲಿ ಪ್ರವೇಶಿಸುವ ಮಾಯಾವಾಸ್ತವದ ವಿವರಗಳು ನೆನಪು ಹಾಗೂ ವರ್ತಮಾನಗಳು ಸೇರಿಕೊಳ್ಳುವ ಕೂಡು ಬಿಂದುಗಳು. ಬದುಕಲ್ಲಿ, ಜೀವ ಕಾಮದ ಶುದ್ಧ ಸತ್ಯಗಳು, ಕೇಡನ್ನು ಹೇಗೆ ಎದುರಿಸಬೇಕು ಎಂಬ ಪ್ರಶ್ನೆ ಎದುರಾದಾಗ, ಸಂಗೀತದ ರೂಪಗಳ ಸಂಮೋಹನ ಸಾಕಾಗುವುದಿಲ್ಲ. ಭಾವ ಲಹರಿಯಗಳ ಆವಿರ್ಭಾವ ಸ್ವಯಂ ತಾನೇ ತನಗೆ ಪ್ರಮಾಣವಾಗಲು ಒದಗಿ ಬರುವುದಿಲ್ಲ. ಅದು ವಿಚಾರದ ಜೊತೆ ಮಾಗಿ ಅನುಭವವಾಗಿ ಅಲ್ಲಿಂದ ಅಂತರಂಗ ಬಹಿರಂಗಗಳ ಸಾವಯವ ಸಂಬಂಧದಲ್ಲಿ, ಅನುಭಾವದ ಎತ್ತರಕ್ಕೆ ಏರಬೇಕು. ಬೇಂದ್ರೆಯವರಲ್ಲಿ 'ಕಣ್ಣ ಕಾಣಿಕೆ' ಕವನ, ಅದೇ ಸಂಗೀತದ ರೂಪಗಳು 'ಅಂತರಂಗದಾ ಮೃದಂಗ ಇಂತು ತೋಂ ನನಾನ'ವಾಗಿ ಚಿತ್ತ ತಾಳ ಬಾರಿಸಿ, ನೆನಪು ತಂತಿಯನ್ನು ಮೀಟಿ ಲೌಕಿಕದಲ್ಲಿ ಮುಳುಗಿ ಮೇಲೆದ್ದು ಮತ್ತೆ ಸಾಗುತ್ತದೆ.

'ಮಾಯಿಯ ಮುಖಗಳು'ದಲ್ಲಿ ಪಾಟೀಲರ ಸಂಗೀತದ ಪ್ರತಿಮೆಗಳು ಲೌಕಿಕದಲ್ಲಿ ಮುಳುಗಿ ಮೇಲೇಳಲು ಸಾಕಾಗುತ್ತದೆ. ಆದರೆ ಆ ಅನುಭವವು ಲೌಕಿಕದ ನೆಲೆಯಾಚೆಗಿನ ಅನುಭಾವದ ಶೋಧನೆಗೆ ಇಳಿದಾಗ ತತ್ತರಗೊಳ್ಳುತ್ತದೆ. ಲೇಖಕ ಸೃಜಿಸುತ್ತಿರುವ ಅನುಭವವೇ ಆತನನ್ನು ಮೀರಿ ಮೇಲೇರುವ ಕ್ರಮ ಅದು. ಅಂತಹ ಮಹತ್ ದರ್ಶನವನ್ನು ಆಧರಿಸಿಕೊಳ್ಳಲು ದೇವರು,ಧರ್ಮಗಳ ಹತ್ತಿರ ಹೋಗಬೇಕಾದ ಒತ್ತಡ ಸೃಷ್ಟಿಯಾಗಿದೆ. ವೈಚಾರಿಕವಾಗಿ ಆ ಬಗ್ಗೆ ಅನುಮಾನವಿರುವ ಪಾಟೀಲರು ಪರಿಹಾರೋಪಾಯವಾಗಿ ಮಾಯಾವಾಸ್ತವವಾದಕ್ಕೆ ಶರಣಾಗುತ್ತಾರೆ. ಅದು ಲೌಕಿಕ ಅಲೌಕಿಕದ ಸಾಮರಸ್ಯದ ಸಮಸ್ಯೆಗಳನ್ನು ಸರಳಗೊಳಿಸುತ್ತದೆ. ಹಾಗೆಯೇ ಬದುಕಿನ ಲಯದಲ್ಲಿ ಕಾಣದಂತಿರುವ ಕೇಡನ್ನು ಸಾಕಾರಗೊಳಿಸಲು ಸರಳ ಉಪಾಯಗಳಿಗೆ ಮೊರೆಹೋಗುತ್ತದೆ. ಕತೆಯ ಕೊನೆಯ ಈ ಮಿತಿಯನ್ನು ಅದರ ಪ್ರಾರಂಭದಿಂದಲೂ ಬೆಳೆಯುತ್ತಾ ಬಂದ ಅಲೌಕಿಕ ಅನುಭವನ್ನು ಗೌರವದಿಂದ ಗ್ರಹಿಸಿ ಈ ಮಾತುಗಳನ್ನು ಹೇಳುತ್ತಿದ್ದೇನೆಂಬ ಸೂಕ್ಷ್ಮವನ್ನು ಓದುಗರಿಗೆ ಪುನಃ ನೆನಪಿಸಿಕೊಡುತ್ತೇನೆ.

ಹೆಣ್ಣು ಸೂಲದ ಅಪವಾದ ಹೊತ್ತ ಕಲ್ಲೋಪಂತರ ಕುಟುಂಬ, ಹುಡುಗಿಯರು ಸಂಗೀತ ಕಲಿಯಲಿ, ಆಧುನಿಕ ಪ್ರವೇಶವಾಗಲಿ, ಮುಂದೆ ಕುಟುಂಬಕ್ಕೆ ಒಳ್ಳೆಯದಾಗಲಿ ಎಂದು ತಮ್ಮ ಹಳ್ಳಿ ಬಿಟ್ಟು ಬೆಳಗಾವಿಗೆ ಬರುತ್ತಾರೆ. ಅಲ್ಲಿಂದ ಮುಂದಿನ ಸಂಗೀತ ವಿದ್ಯಾಭ್ಯಾಸಕ್ಕಾಗಿ ಧಾರವಾಡ,ಹುಬ್ಬಳ್ಳಿಗೆ ಹೋಗುತ್ತಾರೆ. ಗಂಗೂಬಾಯಿ ಹಾನಗಲ್ ಬಳಿ ಸಂಗೀತ ಕಲಿಯುತ್ತಾರೆ. ಮನೆಯಲ್ಲಿ ಹೆತ್ತ ತಾಯಿಯಿದ್ದಂತೆ ಅವರಿಗೆ ಗುರುವಿನಲ್ಲಿ ಮತ್ತೊಬ್ಬ ತಾಯಿ ಸಿಗುತ್ತಾರೆ. ಗಂಗಾ, ನರ್ಮದಾ ಹಾಗೂ ತುಂಗಾ ಈ ಮೂವರು ಹುಡುಗಿಯರು ಲೌಕಿಕ ಸಂಗೀತದಲ್ಲಿ ಎಲ್ಲವನ್ನು ಪಡೆಯುತ್ತಾ ಏನೇನೋ ಆಗಿ ಹೋಗುತ್ತಾರೆ. ಆಳ, ಸ್ವಾತಂತ್ರ್ಯ, ನಿರ್ಭಯತೆಗಳಿಂದ ಸ್ವಚ್ಛಂದ ಜೀವವಾಗಿ ಬೆಳೆಯುವ ಈ ಭಾವಗಳು ಅನುಭವವಾಗಿ ಮಾಗುತ್ತಾ ಅಂತ್ಯದಲ್ಲಿ ಸುಖವಲ್ಲದ ಕೊನೆಗಾಣುತ್ತಾರೆ. ಒಬ್ಬಾಕೆ ಸಂನ್ಯಾಸಿನಿಯಾದರೆ ಮತ್ತೊಬ್ಬಾಕೆ ಡ್ಯಾನ್ಸ್ ಮಾಸ್ಟರ್‌ನ ಜೊತೆ ಓಡಿ ಹೋಗುತ್ತಾಳೆ. ಸಂಸಾರಿಯಾಗುವ ಮತ್ತೊಬ್ಬಾಕೆ ಸಾವನ್ನಪ್ಪುತ್ತಾಳೆ. ಲೌಕಿಕ ಜೀವನವನ್ನು ಮೀರಿದ ಶಕ್ತಿ ಯಾವುದು ಎಂಬ ಚಿಂತನೆಗೆ ಇದು ನಮ್ಮನ್ನು ಪ್ರೇರೇಪಿಸುತ್ತದೆ.

ಜೀವನ ಹಾಗೂ ಧ್ಯಾನ;ಅಲ್ಲೆ ಹುಟ್ಟಿ ಅಲ್ಲೇ ಸಾಧಿಸಿ ಅಲ್ಲಿಗೆ ಮುಗಿವ ಸಂಗೀತದ ವರ್ತಮಾನದಲ್ಲಿ ಸಾಧಿತವಾಗಬೇಕು. ಬದುಕೂ ಅಷ್ಟೆ. ಅಲ್ಲೇ ಹುಟ್ಟಿ ಅಲ್ಲೇ ಬೆಳೆದು ಅಲ್ಲೇ ಸಾಧಿತಗೊಳ್ಳಬೇಕು. ಅದನ್ನು ಸಂಗೀತದ ಗುರುಗಳು ಹೇಳುವ ಕ್ರಮ:

'ಧ್ಯಾನಾ ಅನ್ನೋದು ಬರೇ ಮನಸಿನೊಳಗ ನಡದಿದ್ದರೂ ಇಡೀ ಶರೀರ ದಣದಿರತದ...ಶರೀರಾ ಬಿಟ್ಟು ಮನಸ್ಸಿಲ್ಲಾ...ಅದಕ್ಕ$ ಶರೀರಕ್ಕ ವಿಶ್ರಾಂತಿ ಕೊಡಬೇಕು. ಅದಕ್ಕ ವಿಶ್ರಾಂತಿ ಸಿಕ್ಕರ ಮನಸಿಗೂ ಹೊಸಾ ಶಕ್ತಿ ಬರತದ.... ಧ್ಯಾನದೊಳಗ ಸಾಧಿಸಿದ್ದು ಮನಸಿಗೆ ಪೂರಾ ದಕ್ಕಬೇಕಂದರ ವಿಶ್ರಾಂತಿ ಬೇಕ$ ಬೇಕು. ಇಲ್ಲಾತಂದರ ಸಿಕ್ಕಿದ್ದು ಎಲ್ಲಾ ಸೋರಿ ಹೋಗತದ...'.

ವರ್ತಮಾನದಲ್ಲೂ ಅಷ್ಟೆ. ಸಿಕ್ಕಿದ್ದು ಸೋರಿಹೋಗದ ಹಾಗೆ ನೋಡಿಕೊಳ್ಳುವ ಒತ್ತಡವನ್ನು ನಿರಂತರವಾಗಿ ಕತೆಗಾರರಾಗಿ ಪಾಟೀಲರು ಎದುರಿಸುತ್ತಾ ಬಂದಿದ್ದಾರೆ. ಕಾಲಾತೀತತೆ ಕಾಲದ ಲಯವನ್ನು ಒಪ್ಪಿಕೊಂಡೀತೇ ಎಂಬುದು ಪಾಟೀಲರ 'ಮಾಯಿಯ ಮುಖಗಳು' ಕತೆಯ ಅಂತರ್ಗತ ಹುಡುಕಾಟ. ಒಂದು ಸಂದರ್ಭದಲ್ಲಿ ಕತೆಯೊಳಗೆ ಅವರೇ ಕಾಣಿಸುವಂತೆ:

'...ಧ್ರುತವೂ ತೀನ್ ತಾಳದಲ್ಲಿಯೇ ನರ್ತಿಸುತ್ತಿತ್ತು....ಈಗ...ಈ ಕ್ಷಣದಲ್ಲಿ....ಗಂಗಾ ಕಟ್ಟಿದ ಗುಡಿ, ತುಂಗಾ ಹರಿಸಿದ ಝರಿ, ಮತ್ತು ನರ್ಮದಾ ಹುಟ್ಟಿಸಿದ ಮಿಂಚಿನ ನರ್ತನ, ಇವೆಲ್ಲಾ ಅಲ್ಲಿ ಹತ್ತು ಕಂಬಗಳಿರುವ ಕಲ್ಲೋಪಂತರ ಐದಂಕಣದ ಆ ಪಡಸಾಲಿಯಲಿ, ಸಂಜೆ ಹರಿದು ಕತ್ತಲಿ ಹರಡುತ್ತಿದ್ದ ಆ ಘಳಿಗೆಯಲ್ಲಿ...ಅವು ಒಂದನ್ನೊಂದು ಛೇದಿಸಿ ಹಾದು ಹೊಕ್ಕಾಡಿ ಅಲ್ಲಿ ಆಳವಾದ ನಿಶ್ಚಲತೆ ಮತ್ತು ಅಪಾರವಾದ ಚಲನೆ ಒಂದಕ್ಕೊಂದು ತಳಕು ಬಿದ್ದು...ಅಹಹಾ ಅಹಾಹಾ! ಅಲ್ಲಿ ಸ್ಥಿರವಾದ ಒಂದು ಮಿಂಚು ನಿಂತು ಆ ಮಿಂಚಿನ ಕಂಬವೆಂಬುದರಗುಂಟ ಕಾಲವು ಅದರ ಉದ್ದಕೂ...ಅದರೊಳಗೆ ಹರಿದಾಡಿ...ಆ ಮಿಂಚು ಚಕ–ಚಕವೆಂದು ಹೋಯ್ದಾಡುವಂತಾಗಿ ಏನು ಹೇಳವುದು...ಏನು ಹೇಳುವುದು...!? ರಾಗದ ನರ್ತನ ಪೂರ್ಣಗೊಂಡಾಗ ಫಕೀರಪ್ಪನ ಕೈ ಬೆರಳುಗಳು ಅವನ ಇಚ್ಛೆಯನ್ನು ಮೀರಿ ಅವುಗಳ ಇಚ್ಛೆಯಂತೆ ನುಡಿದು ನಿಂತುಕೊಂಡಿದ್ದವು...ಕಾಲಾತೀತತೆ ಕಾಲದ ಲಯವನ್ನು ಒಪ್ಪಿಕೊಂಡೀತೇ !'

ಗಂಗಾ, ತುಂಗಾ, ನರ್ಮದಾ ಎಂಬ ಮೂವರು ಕಲ್ಲೋಪಂತರ ಕುಟುಂಬದ ಹುಡುಗಿಯರ ಮೂಲಕ ಸಂಗೀತದ ಸಾಮ್ರಾಜ್ಯವನ್ನು ಬಳಸಿ ಪಾಟೀಲರು ಚಲನೆ ಹಾಗೂ ನಿಶ್ಚಲತೆಯ, ಅಂದರೆ ಸದ್ಯ ಹಾಗೂ ಶಾಶ್ವತದ ಕೂಡು ಬಿಂದುವಿನಲ್ಲಿ ಬದುಕಿನ ಅರ್ಥದ ಶೋಧಕ್ಕೆ ಇಲ್ಲಿ ಇಳಿದಿದ್ದಾರೆ,ಅಲೌಕಿಕತೆಯ ವ್ಯಾಪ್ತಿಗೆ ಕೈ ಚಾಚಿದ್ದಾರೆ. ಇದು ಪಾಟೀಲರ ಸಾಹಿತ್ಯದ ಮುಂದಿನ ಹೆಜ್ಜೆಗಳನ್ನು ಸೂಚಿಸುವಂತಿದೆ.

ಈ ಬರಹದ ಮೊದಲಿಗೆ ಪಾಟೀಲರ ಕತೆಗಳ ಅನುಭವ ಲೋಕ, ತನಗೆ ತಾನೇ ಪ್ರಮಾಣ ಎಂದು ಹೇಳಿದ್ದೆ. ಹಾಗಾದರೆ ಕನ್ನಡ ಕಥಾ ಸಾಹಿತ್ಯ ಲೋಕದಲ್ಲಿ ಇವುಗಳನ್ನು ಹೇಗೆ ಗುರುತಿಸಬೇಕು ಎಂಬುದು ಸಹಜವಾದ ಮುಂದಿನ ಪ್ರಶ್ನೆ.ಪಾಟೀಲರು ಕಥೆ ಬರೆಯಲು ಪ್ರಾರಂಭಿಸಿದ ಕಾಲಕ್ಕೆ ಪ್ರಧಾನ ಧಾರೆಯಾಗಿದ್ದ ನವ್ಯಕತೆಗಳು ಅನುಭವವನ್ನು ಪ್ರಾತಿನಿಧಿಕ ಸ್ವರೂಪದಲ್ಲಿ ಸ್ಥಾಪಿಸಿದವು.ಆದ್ದರಿಂದ ಸಾಂಕೇತಿಕತೆ ಮುನ್ನೆಲೆಗೆ ಬಂತು. ಆ ಬಳಿಕ ದಲಿತ ಹಾಗೂ ಬಂಡಾಯ ಸಾಹಿತ್ಯ ವ್ಯಕ್ತಿ ಕೇಂದ್ರಿತ ಚಿಂತನೆಗಳಿಗಿಂತ ಹೊರಗಿನ ಸಮುದಾಯದ ಪ್ರಶ್ನೆಗಳನ್ನು ಎತ್ತಿದವು. ರಾಘವೇಂದ್ರ ಪಾಟೀಲರು ಈ ಎರಡೂ ನೆಲೆಗಳಿಗೆ ಚರಿತ್ರೆಯ ಅಂಶಗಳನ್ನು ಸೇರಿಸಲು ಪ್ರಯತ್ನಿಸುತ್ತಾರೆ.

ಈ ಕಥಾ ಲೋಕದ ಸಮುದಾಯದ ಕಲ್ಪನೆಯು, ಅವುಗಳ ಪರಿಸರದ ಭಾಷೆಯ ಮೂಲಕ ಮತ್ತು ಚರಿತ್ರೆಯ ತಾತ್ವಿಕತೆ ಫ್ಯೂಡಲ್ ವ್ಯವಸ್ಥೆಯ ನೆನಪಲ್ಲಿ ಮೈ ತಾಳುತ್ತವೆ. ಭಾಷೆ ಮತ್ತು ಫ್ಯೂಡಲ್ ನೆನಪುಗಳ ಮೂಲಕ ಇಲ್ಲಿನ ಕತೆಗಳ ಅನುಭವ,

ನಿರ್ದೇಶನ ಇನ್ನೂ ವ್ಯಕ್ತಿ ಮೂಲಗಳಿಗೇ ಆತುಕೊಂಡಿವೆ. ಪಾಟೀಲರ ಈಚೆಗಿನ ಹೊಸ ಕತೆಗಳು ಶೋಧದಲ್ಲಿ ಅಂತರಂಗ–ಬಹಿರಂಗಗಳು ಅಲೌಕಿಕ ನೆಲೆಯಲ್ಲಿ ವ್ಯಕ್ತಿಯ ಭಾವ ಹಾಗೂ ಬ್ರಹ್ಮಾಂಡದ ಭಾವಗಳ ಸಾವಯವ ಸಂಪೂರ್ಣತೆ ಏನೆಂಬ ಶೋಧನೆಗೆ ತೊಡಗಿವೆ. ಅಲೌಕಿಕದ ಶೋಧವಂತೂ ನಮ್ಮಲ್ಲಿ ಋಗ್ವೇದದಷ್ಟು ಹಿಂದಿನದು. ಆದ್ದರಿಂದ ಅಲ್ಲಿ ಹೊರಳುವ ಹೊಸದಾರಿಯೂ ಸುಲಭದಲ್ಲಿ ಸರಳ ಸೂತ್ರಗಳನ್ನು ನೀಡಲಾರವು. ಆದ್ದರಿಂದ ಅವರ ಕತೆಗಳು ಮಾರ್ಗಪ್ರವರ್ತಕ ನಿರ್ದೇಶನ ನೀಡುವುದು, ಹೊಸ ಕಾಲದ ಅಗತ್ಯವಾದಾಗ ಮಾತ್ರ ಸಾಧ್ಯ. ಈ ಮಾತನ್ನು ಹೇಳುವಾಗ, ರಾಘವೇಂದ್ರ ಪಾಟೀಲ ಮತ್ತು ಅಂತಹ ಅನೇಕ ಬರಹಗಾರರ ಹೊಸ ಪ್ರಯತ್ನಗಳು ಭಾಷೆಯಲ್ಲಿ ಪ್ರವಹಿಸಿದಾಗ ಅವು ಮುಂದೊಮ್ಮೆ ಮಹತ್ತರವಾದ ಬದಲಾವಣೆಯನ್ನು ಸೂಚಿಸಬಲ್ಲ ಕೃತಿಯ ಹುಟ್ಟಿಗೆ ಕಾರಣವಾಗುತ್ತದೆ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು.

ಇದರ ಜೊತೆ, ಪಾಟೀಲರ ಕತೆಗಳ ಈ ವರೆಗಿನ ಸಾಧನೆ ಏನು ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಸಾಹಿತ್ಯದಲ್ಲಿ ಸಾಹಿತ್ಯದ ದೃಷ್ಟಿಯಿಂದ ಇಂತಹ ಕತೆಗಳು ಬಹಳ ಮುಖ್ಯವಾದ ಕೊಡುಗೆಯನ್ನು ನೀಡುತ್ತವೆ. ಅದನ್ನು ಸಾಹಿತ್ಯ ಬೆಳವಣಿಗೆಯ ಸಂದರ್ಭದಲ್ಲಿಟ್ಟು ನೋಡುವುದು ವಿಮರ್ಶೆಯ ಕ್ರಮಗಳಲ್ಲಿ ಒಂದು. ಪೊಲಿಮಿಕಲ್ ಆದ ನೆಲೆಯಲ್ಲಿ ಒಂದರ ಎದುರಾಗಿ ಇನ್ನೊಂದು ಬೆಳೆಯುವ ದ್ವಂದ್ವಗಳನ್ನು ನಾವು ಅನೇಕ ನವ್ಯ ಕತೆಗಳಲ್ಲಿ ಕಾಣುತ್ತೇವೆ. ಹೆಚ್ಚಾಗಿ ಅವು ದ್ವಿಕೇಂದ್ರಿತ. ಆದರೆ ಪಾಟೀಲರ ಕತೆಗಳು ಬಹು ಕೇಂದ್ರಿತ. ಅಲ್ಲಿರುವ ಅನೇಕ ಕೇಂದ್ರಗಳು ಒಂದು ಇನ್ನೊಂದರ ಜೊತೆ ಮಾತ್ರವಲ್ಲದೆ ಏಕಕಾಲಕ್ಕೆ ಅನೇಕ ಕೇಂದ್ರಗಳಿಗೆ ಎದುರಾಗುತ್ತವೆ. ಅವರ ಕತೆಗಳಲ್ಲಿ ಒಳಹರಿವಾಗಿ ಪ್ರವಹಿಸುವ ಈ ಬಹು ಕೇಂದ್ರಗಳು, ಕಾದಂಬರಿ 'ತೇರು'ವಿನಲ್ಲಿ ಮೇಲು ನೋಟಕ್ಕೆ ಹರಳುಗಟ್ಟಿ ಕಾಣಿಸಿಕೊಳ್ಳುತ್ತವೆ. ಅವು ಸಂಕೀರ್ಣವಾದ ಬಹುಕೇಂದ್ರಿತ ದ್ವಂದ್ವಗಳು.ಅವುಗಳನ್ನು ಅರ್ಥದ ಆಚೆಗೆ ಗ್ರಹಿಸಬೇಕಾದ ಮಾನದಂಡಗಳಿನ್ನೂ ಬೆಳೆಯಬೇಕಾಗಿದೆ.

ರಾಘವೇಂದ್ರ ಪಾಟೀಲರದು ಆಧುನಿಕ ಮನಸ್ಸು. ಅದು ಇರುವುದನ್ನು ಇರುವಂತೆ ಕಾಣಲು ಪ್ರೇರೇಪಿಸುತ್ತದೆ. ಇರಬೇಕಾದಂತೆ ಕಾಣಲು ಸುಲಭವಾಗಿ ಒಪ್ಪುವುದಿಲ್ಲ. ಆದರೆ ಪಾಟೀಲರಿಗೆ ಆಧುನಿಕತೆ ಭಾವ ನೆಮ್ಮದಿಯನ್ನು ನೀಡಲಾರದು. ಶುದ್ಧ ವಿಜ್ಞಾನದ ನಿರ್ವಿಕಾರತೆ ಅವರಿಗೆ ತೃಪ್ತಿ ನೀಡಲಾರದು. ಆದ್ದರಿಂದ ದೇಸಗತಿಯ ನೆನಪಿನಲ್ಲಿ ಭಾವ ಲೋಕವನ್ನು ಪ್ರವೇಶಿಸಿದ, ಚರಿತ್ರೆ ಹಾಗೂ ವರ್ತಮಾನದ ಬದುಕಿನ ಸತ್ಯಗಳು, ಅವರನ್ನು ಅತ್ತಲೂ ಇತ್ತಲೂ ಒಯ್ದು ತೊಯ್ದಾಡಿಸಿವೆ. ಅವರ ಬರಹಗಳ ಬೌದ್ಧಿಕ ನಿರ್ದೇಶನ, ಆಧುನಿಕ ಚಿಂತನೆಗಳಿಂದ ಪ್ರೇರೇಪಣೆಗೊಂಡಿದೆ. ಆದರೆ ಅವರ ಭಾವ ಲಹರಿ ಬದುಕಿನ ನೆನಪಲ್ಲಿ ಪರ್ಯವಸಾನಗೊಳ್ಳುತ್ತದೆ. ಅನುಭವದ ಲವಲವಿಕೆಯು ಭಾವ ನಿರ್ದೇಶನಕ್ಕೆ ಒಳಗಾಗುತ್ತದೆ. ಆದ್ದರಿಂದ ಬದುಕಿನ ಪ್ರೀತಿ ಸೌಂದರ್ಯಗಳ ಮೂಲ ಸೆಲೆ ಎಲ್ಲಿದೆ ಎಂಬುದು ಅವರಿಗಿನ್ನೂ ನಿಗೂಢವಾಗಿದೆ. ವ್ಯಕ್ತಿ, ಸಮುದಾಯ, ಚರಿತ್ರೆ ಇವುಗಳ ಕೂಡು ಬಿಂದುವಿನಲ್ಲಿ ಆವಿರ್ಭವಿಸುವ ಬದುಕನ್ನು ಸ್ವೀಕರಿಸಬೇಕಾದ ನೆಲೆಗಳಾವುವು? ಸಾಧಿಸಬೇಕಾದ ಗುರಿಯಾವುದು? ಇತ್ತೀಚೆಗಿನ ಕತೆಗಳಲ್ಲಿ ಅಲೌಕಿಕ ನೆಲೆಯೊಂದು ಸೇರಿರುವುದರಿಂದ ಅನುಭವದ ಶೋಧನೆಯ ದಿಕ್ಕು ಯಾವುದು? ಈ ಹುಡುಕಾಟಗಳಲ್ಲಿ ರಾಘವೇಂದ್ರ ಪಾಟೀಲರು ಇನ್ನೂ ತೊಡಗಿಕೊಂಡಿದ್ದಾರೆ.ಶೋಧದ ಒಂದು ಹಂತದಲ್ಲಿ 'ತೇರು' ಸೃಷ್ಟಿಯಾಯಿತು. ಅಲೌಕಿಕತೆಯತ್ತ ಕೈ ಚಾಚತೊಡಗಿರುವ ಅದರ ಇಂದಿನ ಮುಂದುವರಿಕೆಯ, ಮುಂದಿನ ಮಜಲು ಏನನ್ನು ಸಾಧಿಸಬಹುದು ಎಂಬ ಭವಿಷ್ಯ ನುಡಿಯುವುದು ವಿಮರ್ಶೆಯ ಕೆಲಸವಲ್ಲ. ಆದರೆ ಅವರು ವಿಸ್ತರಿಸಿಕೊಳ್ಳುತ್ತಿರುವ ಕಥನ ಪ್ರಪಂಚ, ಪುನಃ ಚರಿತ್ರೆಯ ಮೂಲವನ್ನೇ ಪರೀಕ್ಷಿಸಲು ತೊಡಗುತ್ತದೋ ಅಥವಾ ವ್ಯಕ್ತಿ ಶಕ್ತಿಗಳ ನಡುವಿನ ಸಾಧ್ಯತೆಗಳನ್ನು ಹೆಚ್ಚಾಗಿ ಪರೀಕ್ಷಿಸುತ್ತದೋ ಎಂಬ ಕುತೂಹಲವನ್ನಂತೂ ಅವರ 'ಮತ್ತೊಬ್ಬ ಮಾಯಿ' ಮೊದಲಾದ ಈಚಿನ ಕತೆಗಳು ಕೆರಳಿಸುತ್ತವೆ. ಅವರು ಇನ್ನೂ ಬರೆಯುತ್ತಿರುವ ಅನುಭವಿ, ನುರಿತ ಬರಹಗಾರರಾಗಿರುವುದರಿಂದ, ಅವರ ಬರಹಗಳು ಹೊಸ ಮಾನದಂಡಗಳನ್ನು ನೀಡಬಲ್ಲವೋ ಹೇಗೆಂಬ ಕುತೂಹಲವಂತೂ ಅವರ ಮುಂದಿನ ಕತೆಗಳನ್ನು ಓದುವಾಗ ಇದ್ದೇ ಇರುತ್ತದೆ.

ಟಿಪ್ಪಣಿಗಳು :

೧. ರಾಘವೇಂದ್ರ ಪಾಟೀಲರ ಕತೆಗಳ ಸಂದರ್ಭದಲ್ಲಿ ಚರಿತ್ರೆ ಹಾಗೂ ಸಮುದಾಯಗಳ ಬಗೆಗಿನ ಚರ್ಚೆಯನ್ನು ನಮ್ಮ ಮುಖ್ಯ ವಿಮರ್ಶಕರಾದ ಡಾ॥ಜಿ.ಎಸ್.ಆಮೂರ ಹಾಗೂ ಡಾ॥ರಾಜೇಂದ್ರ ಚೆನ್ನಿ ಈಗಾಗಲೇ ತಮ್ಮ ವಿಮರ್ಶಾ ಬರಹಗಳಲ್ಲಿ ಪ್ರಾರಂಭಿಸಿದ್ದಾರೆ. ನನ್ನ ಈ ಬರಹವನ್ನು ಆ ಚರ್ಚೆಯ ಮುಂದುವರಿಕೆ ಎಂದೇ ಪರಿಗಣಿಸಬೇಕೆಂಬುದು ನನ್ನ ಆಶಯ.

೨. 'ತುದಿಯೆಂಬೋ ತುದಿಯಿಲ್ಲ' ರಾಘವೇಂದ್ರ ಪಾಟೀಲರ ಇದುವರೆಗಿನ ಕತೆಗಳ ಸಂಗ್ರಹ ಅವರ ಎಲ್ಲಾ ಕತೆಗಳನ್ನು ಸಂಗ್ರಹಿಸಿಕೊಟ್ಟಿದೆ. ಅದರಲ್ಲಿ ಪಾಟೀಲರ 'ಒಡಪುಗಳು', 'ಪ್ರತಿಮೆಗಳು', 'ಬಾಳವ್ವನ ಕನಸುಗಳು', 'ದೇಸಗತಿ', 'ಮಾಯಿಯ ಮುಖಗಳು' ಸಂಕಲನದ ಎಲ್ಲಾ ಕತೆಗಳು ಸೇರಿವೆ. ಇತ್ತೀಚೆಗೆ 'ದೇಶಕಾಲ' ಪ್ರಕಟಿಸಿದ 'ಮತ್ತೊಬ್ಬ ಮಾಯಿ' ಎಂಬ ಒಂದು ಕತೆ ಮಾತ್ರ ಅಲ್ಲಿ ಸೇರ್ಪಡೆಯಾಗಿಲ್ಲ.

೩. ಬಾಳವ್ವ, ಬುಡ್ಡೂಸಾಬ, ಹುಸನ್ಯಾ ಸಮಾಜದ ಸಹಜ ಸದಸ್ಯರಾಗಿ ಇಲ್ಲಿ ಪರಿಗಣಿತರಾಗಿ ಪ್ರನಿಧಿಸಲ್ಪಟ್ಟಿದ್ದಾರೆ.ಇಂದಿನ ರಾಜಕೀಯ ಸಂದರ್ಭದಿಂದಾಗಿ ಹಿಂದೂ ಮುಸ್ಲಿಂರ ನಡುವೆ ಉಂಟಾಗುತ್ತಿರುವ ಬಿರುಕುಗಳನ್ನು ಗಮನಿಸಿದರೆ ಈ ಮುಸಲ್ಮಾನರನ್ನು ಅವರ ಧಾರ್ಮಿಕ ಲೋಕದ ಪ್ರತಿನಿಧಿಗಳಾಗಿ ಕಾಣದೆ ಕೇವಲ ಮಾನವರಾಗಿ ಕಾಣುವುದೂ ಕೂಡ ಸಾಮರಸ್ಯದ ಸಮಾಜದ ಒಂದು ಸಹಜ ಸಾಕ್ಷಿಯಂತೆ ಗೋಚರಿಸುತ್ತದೆ. ಈ ದೃಷ್ಟಿಯಿಂದ 'ಬಾಳವ್ವನ ಕನಸುಗಳು' ಸಮಾಜ ಶಾಸ್ತ್ರದ ಅಧ್ಯಯನಕ್ಕೂ ಒದಗಿ ಬರಬಲ್ಲ ಕತೆ.

ಪೂರಕ ಓದು:

೧. 'ಕಣ್ಣ ಕಾಣಿಕೆ' ಕವನ – ಡಾ। ದ.ರಾ.ಬೇಂದ್ರೆ (ಗಂಗಾವತರಣ ಸಂಕಲನ)

೨. ಬಿಲಾಸ್‌ಖಾನ್ – ಕತೆ– ಡಾ। ಶಂಕರ ಮೊಕಾಶಿ ಪುಣೇಕರ

೩. ಕನ್ನಡ ಕಥನ ಸಾಹಿತ್ಯ : ಡಾ। ಜಿ.ಎಸ್. ಆಮೂರ

೪. ಸಮುಚ್ಚಯ : ವಿಮರ್ಶಾ ಸಂಪುಟ – ಶ್ರೀ ಜಿ.ಎನ್.ರಂಗನಾಥ ರಾವ್

೫. ಅಸಮಗ್ರ : ವಿಮರ್ಶಾಲೇಖನಗಳ ಸಂಗ್ರಹ : ಡಾ। ರಾಜೇಂದ್ರ ಚೆನ್ನಿ

೬. ದೇವರ ವಿರುದ್ಧ ನನ್ನ ಬಂಡಾಯವಿದೆ – ತೇರು ಕಾದಂಬರಿ ಕುರಿತು ವಿಮರ್ಶಾಲೇಖನ– ಶ್ರೀ ಎಚ್.ಕೆ ವೆಂಕಟೇಶ(ಹೊಸತು ಪತ್ರಿಕೆ. ನವಂಬರ್ ೨೦೦೮)

೭. ತೇರು: ಒಂದು ಐತಿಹ್ಯದ ನಿರಚನೆ : ಡಾ। ಕೆ.ವಿ. ತಿರುಮಲೇಶ್ (ವಿಜಯ ಕರ್ನಾಟಕ – ಆಳ ನಿರಾಳ– ಅಂಕಣ. ೨೯–೮–೨೦೦೮)

೮. 'ಒಡಪುಗಳು' 'ಪ್ರತಿಮೆಗಳು' ' ಬಾಳವ್ವನ ಕನಸುಗಳು' 'ಮಾಯಿಯ ಮುಖಗಳು' 'ದೇಸಗತಿ' 'ತುದಿಯೆಂಬೊ ತುದಿಯಿಲ್ಲ' ಕಥಾ ಸಂಕಲನಗಳಿಗೆ ಕ್ರಮವಾಗಿ ಪ್ರೊ। ಎಲ್.ಎಸ್.ಶೇಷಗಿರಿರಾವ್, ಡಾ। ಯು.ಆರ್.ಅನಂತಮೂರ್ತಿ, ಡಾ। ಕೆ.ವಿ. ನಾರಾಯಣ, ಪ್ರೊ। ಓ.ಎಲ್. ನಾಗಭೂಷಣ ಸ್ವಾಮಿ, ಡಾ। ರಾಜೇಂದ್ರ ಚೆನ್ನಿ ಅವರುಗಳು ಬರೆದ ಮುನ್ನುಡಿಗಳು ಮತ್ತು ಡಾ। ನರಹಳ್ಳಿ ಬಾಲಸುಬ್ರಹ್ಮಣ್ಯರವರ 'ದೇಸಗತಿ' ಸಂಕಲನದ ಬಗೆಗಿನ ಲೇಖನ.

೯. 'ತೇರು' ಕಾದಂಬರಿಗೆ ಡಾ। ಸಿ.ಎನ್. ರಾಮಚಂದ್ರನ್ ಬರೆದ ಮುನ್ನುಡಿ.

ಲೇಖಕರ ವಿಳಾಸ :
ಎಸ್.ಆರ್. ವಿಜಯಶಂಕರ
೯–೨/೧೦೩, ಓಂಕಾರ್ ಎಪಾರ್ಟ್‌ಮೆಂಟ್ಸ್

೧೨ನೇ ಅಡ್ಡ ರಸ್ತೆ, ೮ನೇ ಮುಖ್ಯರಸ್ತೆ
ಮಲ್ಲೇಶ್ವರ, ಬೆಂಗಳೂರು ೫೬೦೦೦೩.
ಫೋನ್ : ೦೮೦– ೨೩೪೬೭೮೫೨
ಇಮೈಲ್ : ¸ಡಿಷ್ಠಚಿಟಿಞಚಿಡಿ@ಥಿಚ್ಞಹಿಥಿಛಿಠಟ